ಆರ್ಬಿಟ್ ಸಂಸ್ಥೆ, ಹುಮನಾಬಾದ ಮತ್ತು

ಸೇವಾ ಸಂಗಮ ಸಮಾಜ ಸೇವಾ ಸಂಸ್ಥೆ, ಕಲಬುರಗಿ

# ಸೇವಾವಾಣಿ

## ಡಿಸೆಂಬರ್ 2024








DECEMBER 2024

## "ಪ್ರೌಢಶಾಲಾ ಶಿಕ್ಷಕರಿಗೆ ಒಂದು ದಿವಸದ ಆಪ್ತ ಸಮಾಲೋಚನ ತರಬೇತಿ ಕಾರ್ಯಗಾರ"

ನವೆಂಬರ್ 28 ರಂದು ಹುಮ್ನಾಬಾದ್ ತಾಲೂಕಿನ ಆರ್ಬಿಟ್ ಸಂಸ್ಥೆಯ ಸಭಾಂಗಣದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಚಿಟಗುಪ್ಪಾ ತಾಲ್ಲೂಕ ಹಾಗೂ ಹುಮ್ನಾಬಾದ್ ತಾಲೂಕಿನ ಎಲ್ಲಾ ಪ್ರೌಢಶಾಲಾ ಶಿಕ್ಷಕರಿಗೆ ಒಂದು ದಿವಸದ ಆಪ್ತ ಸಮಾಲೋಚನ ತರಬೇತಿ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಯಿತು. ಸಂಪನ್ಮೂಲ ವ್ಯಕ್ತಿಗಳಾದ ಆದರ್ ವಿನ್ಸೆಂಟ್ ಪೇರಿರ ನಿರ್ದೇಶಕರು ಮದರ್ ತೆರೇಸಾ ಚಾರಿಟೇಬಲ್ ಟ್ರಸ್ಟ್ ಕಲಬುರ್ಗಿ, ರವರು ತರಬೇತಿಯ ಮುದ್ದೇಶಿಸಿ ಮಾತನಾಡುತ್ತಾ. ಮಕ್ಕಳ ವರ್ತನೆಯಿಂದ ಬಾಹ್ಯವಾಗಿ ಮಾನಸಿಕ ಸ್ಥಿತಿಯನ್ನು ಗುರುತಿಸಬಹುದು. ಆಧುನಿಕ ಯುಗದಲ್ಲಿ ಮಕ್ಕಳು ತನ್ನ ತಾಳ್ಮೆಯನ್ನು ಕಳೆದುಕೊಳ್ಳುತ್ತಿದ್ದಾನೆ, ಆರೋಗ್ಯವೇ ಭಾಗ್ಯ ಎನ್ನುವಂತೆ ಅತಿಯಾದ ಐಶ್ವರ್ಯಕ್ಕಿಂತ ಉತ್ತಮವಾದ ಆರೋಗ್ಯ ಹೊಂದುವುದು ಬಹು ಮುಖ್ಯ ಎಂದು ನುಡಿದರು. ಮಕ್ಕಳು ಖಿನ್ನತೆಗೆ ಒಳಗಾದಾಗ ಅವರನ್ನು ಸೂಕ್ತ ಸಮಯದಲ್ಲಿ ಪತ್ತೆ ಹಚ್ಚಿ ಅವರನ್ನು ಯಾವ ರೀತಿ ಆಪ್ತಸಮಲೋಚನೆ ಮಾಡಿ ಖಿನ್ನತೆಯಿಂದ ಹೋರ ತರಬಹುದು ಎಂದು ಎಲ್ಲಾ ಪ್ರೌಢಶಾಲಾ ಶಿಕ್ಷಕರಿಗೆ ಸಂಕ್ಷಿಪ್ತವಾಗಿ ಮಾಹಿತಿಯನ್ನು ನೀಡಿದರು. ತರಬೇತಿಯಲ್ಲಿ ಆರ್ಬಿಟ್ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ ಅವರು ಕಾರ್ಯಕ್ರಮದ ಮುದ್ದೇಶಿಸಿ ಮಾತನಾಡಿ. ಮಾನಸಿಕ ಕಾಯಿಲೆಗೆ ಮಾಟ ಮಂತ್ರ ಎಂದು ಸಮುದಾಯದ ಜನರು ಭಾವಿಸುತ್ತಾರೆ, ಮತ್ತು ಮೂಢನಂಬಿಕೆ ಬಲಿಯಾಗದೆ, ಇದು ಒಂದು ಮೆದುಳಿನ ಕಾಯಿಲೆಯಾಗಿದೆ ಎಂದು ತಿಳಿದು ಇದಕ್ಕೆ ಸೂಕ್ತ ಚಿಕಿತ್ಸೆ ಕೊಡಿಸುವುದರ ಮೂಲಕ ಕಾಯಿಲೆ ಗುಣಪಡಿಸಬಹುದು ಆದ್ದರಿಂದ ಸೂಕ್ತ ಮನೋವೈದ್ಯಕೀಯ ಚಿಕಿತ್ಸೆಯ ಮೂಲಕ ಮಾನಸಿಕ ಕಾಯಿಲೆಯನ್ನು ಸೂಕ್ತವಾಗಿ ನಿವಾರಣೆ ಮಾಡಬಹುದು. ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು, ಸಹಾಯವಾಣಿಗೆ (14466) ಕರೆ ಮಾಡುವ ಮೂಲಕ ಸೂಕ್ತ ಮಾರ್ಗದರ್ಶನ ಪಡೆಯಬಹುದು ಎಂದರು. ಕಾರ್ಯಕ್ರಮಗಳ ವ್ಯವಸ್ಥಪಕಿಯಾದ ಸಿಸ್ಟರ್ ಶೀಲಾ ಜೆನಿಫರ್, ನವಜೀವನ ಕಾರ್ಯಕ್ರಮದ ಕಾರ್ಯಕರ್ತರು ಹಾಗೂ 40 ವಿವಧ ಪ್ರೌಢ ಶಾಲೆಯ ಶಿಕ್ಷಕರು ಉಪಸ್ಥಿತರಿದ್ದರು.



ಪೂಜ್ಯ ರಾಬರ್ಟ್ ಮಿರಾಂದಾ
ಗುಲಬರ್ಗಾ ಧರ್ಮಾಧ್ಯಕ್ಷರು

ವಂ. ಫಾ॥ ವಿಕ್ಟರ್ ವಾಸ್
ನಿರ್ದೇಶಕರು, ಆರ್ಬಿಟ್ ಮತ್ತು
ಸೇವಾ ಸಂಗಮ ಸಂಸ್ಥೆ, ಕಲಬುರಗಿ









orbit humnabad
Orbit Bidar
@orbitbidar330
www.orbitbidar.in
+91 8660968063
+91 8971119914
Orbitbidar93@gmail.com

NH65, Near Railway Station Road, Humnabad 585330

# “ನವಜೀವನ (ಎ.ಪಿ.ಎಫ್) ಕಾರ್ಯಕ್ರಮ”

## “ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ”



ದಿನಾಂಕ 26/09/2024 ರಂದು ಹುಮನಾಬಾದ್ ತಾಲೂಕಿನ ಘಾಟ್‌ಬೋರಳ ಗ್ರಾಮದ ಹಿರಿಯ ನಾಗರಿಕರಿಗೆ ಆರ್ಬಿಟ್ ಸಂಸ್ಥೆ ಹುಮನಾಬಾದ್ ಹಾಗೂ ಅಜೀಮ್ ಪ್ರೇಮ್‌ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯದ ಶ್ರೀಮತಿ ಪೂಜಾ ಅವರು ಕಾರ್ಯಕ್ರಮ ಉದ್ದೇಶಿಸಿ ಮಾತನಾಡುತ್ತಾ. ಮಾನಸಿಕ ಎಂದರೇನು. ಮಾನಸಿಕ ಕಾಯಿಲೆ ಎಂದರೇನು, ಲಕ್ಷಣಗಳ ಕುರಿತು ಮಾಹಿತಿ ನೀಡುತ್ತಾ, ಮಾನಸಿಕ ಕಾಯಿಲೆ ಬಂದರೆ ಭಯಪಡುವ ಅವಶ್ಯಕತೆ ಇಲ್ಲ ಯಾಕೆಂದರೆ ಇತರ ಕಾಯಿಲೆಗಳಂತೆ ಇದು ಕೂಡ ಒಂದು ಮೆದುಳಿನ ಕಾಯಿಲೆಯಾಗಿದೆ ಇದಕ್ಕೆ ಸೂಕ್ತ ಚಿಕಿತ್ಸೆ ಕೊಡಿಸುವುದರ ಮೂಲಕ ಕಾಯಿಲೆ ಗುಣಪಡಿಸಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 16 ಜನ ಓಣಿಯ ಹಿರಿಯ ನಾಗರಿಕರಿಗೆ ಮತ್ತು ಮಹಿಳೆಯರು ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಂಡರು.

ವರದಿಗಾರರು:– ಪೂಜಾ

## “ವಿಶೇಷ ವಿಕಲಚೇತನರ ಸಂಘದ ಸಭೆ”



ದಿನಾಂಕ 12/11/2024 ರಂದು ಹುಮ್ನಾಬಾದ್ ತಾಲೂಕಿನ ಹಳ್ಳಿಖೇಡ (ಕೆ) ವಾಡಿ ಗ್ರಾಮದ ವಾಲ್ಮೀಕಿ ವಿಕಲಚೇತನರ ಸಂಘದ ಸಭೆಯು ಮಾಡಲಾಯಿತು. ಸರಿಯಾಗಿ ಬೆಳಿಗ್ಗೆ 11:30ಕ್ಕೆ ಸಭೆಯಲ್ಲಿ ಚರ್ಚೆ ಮಾಡಿ ವಿಷಯಗಳು ಎಲ್ಲಾ ಸದಸ್ಯರು ಸಂಘಕ್ಕೆ ಸರಿಯಾದ ಸಮಯಕ್ಕೆ ಬರಬೇಕು ನಿಮ್ಮ ಸಂಘದಿಂದ ಸರ್ಕಾರಿ ಸೌಲಭ್ಯಗಳು ಪಡೆದುಕೊಳ್ಳಬೇಕು. ಎಲ್ಲರೂ ಸೌಲಭ್ಯ ಆಧಾರ್ ಕಾರ್ಡ್, ಪ್ಯಾನ್ ಕಾರ್ಡ್, ಈಶ್ರಮ್ ಕಾರ್ಡ್, ರೇಷನ್ ಕಾರ್ಡ್ ತಿದ್ದುಪಡಿ. ಮಾಡಿಸಿಕೊಳ್ಳಲು ಸಭೆಯಲ್ಲಿ ಮಾಹಿತಿ ತಿಳಿಸಲಾಯಿತು. ಸಂಸ್ಥೆಯಿಂದ ನವಜೀವನ ಕಾರ್ಯಕ್ರಮದ ಕಾರ್ಯಕರ್ತೆಯಾದ ಮಹಾದೇವಿ ಇವರು ಗ್ರಾಮದಲಿ ಮಾನಸಿಕ ಅಸ್ವಸ್ತರ ಸರ್ವೇ ಮಾಡುದರು. ಮತ್ತು ಮಾನಸಿಕ ಕಾಯಿಲೆಯ ಲಕ್ಷಣಗಳು ತಿಳಿಸಲಾಯಿತು ಕಾರಣವಿಲ್ಲದೆ ನಗುವುದು, ಮಾತನಾಡುವರು, ಮನೆಯಲ್ಲಿದ್ದ ವಸ್ತುವನ್ನು ಬಿಸಾಡೋದು ಇಂತಹ ಲಕ್ಷಣಗಳ ಕಂಡುಬಂದಲ್ಲಿ ಅವರಿಗೆ ಉಚಿತವಾಗಿ ಔಷಧಿ ಇದೆ ಹುಮ್ನಾಬಾದ್ ತಾಲೂಕಿನ ಸರ್ಕಾರಿ ಆಸ್ಪತ್ರೆಯಲ್ಲಿ ಬೆಳಿಗ್ಗೆ 10 ಗಂಟೆಗೆ ಪ್ರತಿ ಬುಧವಾರ ಡಾಕ್ಟರ್ ತಪಾಸಣೆ ಮಾಡುತ್ತಾರೆ. ಮತ್ತು ಒಂದು ತಿಂಗಳ ಔಷಧಿ ಕೊಡುತ್ತಾರೆ. ಹೀಗೆ ಅವರಿಗೆ ಔಷಧಿಯನ್ನು ತಿಂಗಳಿಗೆ ಒಮ್ಮೆ ತೆಗೆದುಕೊಂಡು ಹೋಗಬೇಕು ಮತ್ತು ಸಮಯಕ್ಕೆ ಔಷಧಿ ತೆಗೆದುಕೊಳ್ಳುವ ಹಾಗೆ ನೋಡಿಕೊಳ್ಳಬೇಕು ಎಂದು ಮಾಹಿತಿನೀಡಿದರು. ಆರ್ಬಿಟ್ ಸಂಸ್ಥೆಯ ದೂರವಾಣಿ ಸಂಖ್ಯೆ ಮಾಹಿತಿ ನೀಡಿ 9036664271 ಗೆ ಕರೆ ಮಾಡಲು ತಿಳಿಸಿದರು.

ವರದಿಗಾರರು:– ಮಹಾದೇವಿ



ದಿನಾಂಕ:– 21/11/2024 ರಂದು ಹುಮ್ನಾಬಾದ್ ನಗರದ ವಾಂಜರಿ ಕಾಲೋನಿಗೆ ಭೇಟಿ ನೀಡಿ. ಜ್ಯೋತಿ ವಿಶೇಷ ವಿಕಲಚೇತನರ ಸಂಘದ ಸಭೆ ಮಾಡಲಾಯಿತು. ಈ ಸಭೆಯು ಆರ್ಬಿಟ್ ಸಂಸ್ಥೆ ಹಾಗೂ ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಈ ಸಭೆ ನಡೆಸಲಾಯಿತು. ಸಭೆಯಲ್ಲಿ ಸಂಘದ ಸದಸ್ಯರಿಗೆ ಪ್ರತಿ ತಿಂಗಳು ಸಭೆಯಲ್ಲಿ ಭಾಗವಹಿಸಬೇಕು. ಸರ್ಕಾರದ ಸೌಲಭ್ಯಗಳನ್ನು ಪಡೆಯಲು ಮುಂದೆ ಬರಬೇಕು. ಮತ್ತು ಸಮಸ್ಯೆಗಳಿದ್ದರೆ ಸಂಬಂಧ ಪಟ್ಟವರ ಗಮನಕ್ಕೆ ತರಲು ಪ್ರಯತ್ನಿಸಬೇಕೆಂದು ಸಭೆಯಲ್ಲಿ ಚರ್ಚಿಸಲಾಯಿತು.

ವರದಿಗಾರರು:– ನೀಲಕಂಠ



ದಿನಾಂಕ 27/11/2024 ರಂದು ಅಮೀರಬಾದ್ ಗ್ರಾಮದಲ್ಲಿ ಫಲಾನುಭವಿಯಾಗಿರುವ ಕುಟುಂಬಗಳಿಗೆ ಭೇಟಿ ನೀಡಿ. ಜೈ ಲಕ್ಷ್ಮಿ ವಿಶೇಷ ವಿಕಲಚೇತನರ ಸಂಘದ ಸಭೆಯನು ಹಮ್ಮಿಕೊಳ್ಳಲಾಯಿತು, ಈ ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಆಪ್ತ ಸಮಾಲೋಚಕರಾದ ಶ್ರೀ ರವಿಕುಮಾರ್ ಅವರು ವಿಕಲ ಚೇತನರಿಗೆ ಸರ್ಕಾರದಿಂದ ಸಿಗುವ ಸೌಲಭ್ಯಗಳು ಮತ್ತು ಅವರು ಪಡೆದುಕೊಂಡಿರುವ ಸೌಲಭ್ಯಗಳ ಕುರಿತು ಚರ್ಚೆ ಮಾಡಲಾಯಿತು. ಹಾಗೂ ಶ್ರೀ ಡೇವಿಡ್ ರವರು ಉತ್ತಮ ಜೀವನ ಆರೋಗ್ಯದ ಸ್ಥಿತಿಗತಿಗಳ ಕುರಿತು ಮಾಹಿತಿಯನ್ನು ಹಂಚಿಕೊಂಡರು. ಸಂಘದ ಸದಸ್ಯರು ಮಾಹಿತಿಯನ್ನು ಪಡೆದುಕೊಂಡು. ಸರ್ಕಾರದ ಸೌಲಭ್ಯಗಳನ್ನು ಪಡೆಯುವಲ್ಲಿ ಉತ್ಸಾಹಿಗಳಾಗಿದ್ದರು. ಈ ಮೂಲಕ ಅವರು ನಮ್ಮ ಸಂಸ್ಥೆಗು ಹಾಗೂ ಸಂಸ್ಥೆಯ ಕಾರ್ಯಕರ್ತರಿಗೂ ಧನ್ಯವಾದಗಳು ತಿಳಿಸಿದರು.

ವರದಿಗಾರರು: ಡೇವಿಡ್

## “ಅಂಗನವಾಡಿ ಕಾರ್ಯಕರ್ತರಿಗೆ ಮಾನಸಿಕ ಆರೋಗ್ಯದ ಕುರಿತು ತರಬೇತಿ”



ನವೆಂಬರ್ 26ರಂದು ಚಿಟಗುಪ್ಪ ತಾಲೂಕಿನ ಕೊಡಂಬಲ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಚಿಟಗುಪಾ ವಲಯದ ಅಂಗನವಾಡಿ ಕಾರ್ಯಕರ್ತರಿಗೆ ಆರ್ಬಿಟ್ ಸಂಸ್ಥೆ ಹುಮ್ನಾಬಾದ್ ಮತ್ತು ಅಜೀಮ್ ಪ್ರೇಮ್ ಜಿ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಆರೋಗ್ಯದ ಕುರಿತು ತರಬೇತಿಗಾರವನ್ನು ನಡೆಸಲಾಯಿತು. ಈ ತರಬೇತಿ ಕಾರ್ಯಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ ಆರ್ಬಿಟ್ ಸಂಸ್ಥೆಯ ಸಹ ನಿರ್ದೇಶಕರಾದ ವಂದನೆಯ ಫಾದರ್ ವಿಜಯವರು ತರಬೇತಿಯನ್ನು ಉದ್ದೇಶಿಸಿ ಮಾತನಾಡುತ್ತಾ. ಆರೋಗ್ಯ ಎಂದರೇನು? ಮಾನಸಿಕ ಆರೋಗ್ಯ ಎಂದರೇನು? ಮಾನಸಿಕ ಕಾಯಿಲೆ ಬಂದಾಗ ಮೂಢನಂಬಿಕೆ ಬಲಿಯಾಗದೆ, ಇದು ಒಂದು ಮೆದುಳಿನ ಕಾಯಿಲೆಯಾಗಿದೆ. ಸೂಕ್ತ ಸಮಯದಲ್ಲಿ ಗುರುತಿಸಿ ಸೂಕ್ತ ಚಿಕಿತ್ಸೆ ಪಡೆಯುವುದರಿಂದ ಈ ರೋಗವನ್ನು ಗುಣಪಡಿಸಬಹುದು ಎಂದು ಮಾಹಿತಿ ನೀಡಿದರು. ಈ ಕಾರ್ಯಗಾರದಲ್ಲಿ ಆರ್ಬಿಟ್ ಸಂಸ್ಥೆಯ ಸಿಬ್ಬಂದಿ ವರ್ಗದವರು ಚಿಟಗುಪ್ಪಾ ವಲಯದ ಅಂಗನವಾಡಿ ಕಾರ್ಯಕರ್ತೆಯರು ಒಟ್ಟು 30 ಜನರು ಭಾಗವಹಿಸಿದ್ದರು. ವರದಿಗಾರರು: ಅರುಣಕುಮಾರ

## “ಆರೋಗ್ಯವೆ ಭಾಗ್ಯ”,“ಡಿ.ಎಮ್.ಎಚ್.ಪಿ ಕ್ಯಾಂಪಿ ಸರ್ಕಾರಿ ಸೌಲಭ್ಯ”



ನಿರ್ಮಲ ಗಂಡ ರಮೇಶ್ ತಾಲ್ಲೂಕ ಹುಮ್ನಾಬಾದ್ ಹಳ್ಳಿಖೇಡ (ಕೆ) ವಾಡಿ ಗ್ರಾಮದ ನಿವಾಸಿಯಾಗಿದ್ದು ಇವರ ವಯಸ್ಸು 43 ಇವರು ಐದು ವರ್ಷದಿಂದ ಮಾನಸಿಕ ಕಾಯಿಲೆಯಿಂದ ಕಷ್ಟಪಡುತ್ತಿದ್ದರು ಯಾವುದೇ ಆಸ್ಪತ್ರೆಗೆ ಹೋಗದೆ ಮೂಢನಂಬಿಕೆಗೆ ಬಲಿಯಾಗಿದ್ದರು. ಅದಕ್ಕೆ ಇವರ ಮನೆಗೆ ಪದೆ-ಪದೆ ಹೋಗುರುವುದರಿಂದ ಡಿ.ಎಮ್.ಎಚ್.ಪಿ ಕ್ಯಾಂಪಿಗೆ ಬರಲು ಮಾಹಿತಿ ತಿಳಿಸಲಾಯಿತು. ಅದಕ್ಕೆ ಇವರು ನಮಗೆ ಆಗದೆ ಇದ್ದವರು ಮಾಟಮಂತ್ರ ಮಾಡಿದ್ದಾರೆ. ಇದು ಆಸ್ಪತ್ರೆ ರೋಗವಲ್ಲ ಎಂದು ಹೇಳುತ್ತಿದ್ದರು. ಅದಕ್ಕೆ ಇವರ ಮನವಲಿಸಿ ಆಸ್ಪತ್ರೆಗೆ ಬರುವ ಹಾಗೆ ಮಾಡಲಾಯಿತು. ಇದು ಒಂದು ಮೆದುಳಿನ ಕಾಯಿಲೆ. ಡಿ.ಎಮ್.ಎಚ್.ಪಿ ಕ್ಯಾಂಪಿಗೆ ಬರುವ ಹಾಗೆ ಮಾಡಲಾಗಿದೆ. ಈಗ ಇವರು ಸರಿಯಾಗಿ ತಿಂಗಳಿಗೆ ಒಮ್ಮೆ ಬಂದು ಔಷಧಿಯನ್ನು ಪಡೆದುಕೊಳ್ಳುತ್ತಾರೆ. ಮತ್ತು ಇವರು ವಾಲ್ಮೀಕಿ ವಿಶೇಷ ಚೇತನರ ಸಂಘದ ಸದಸ್ಯರಾಗಿದ್ದಾರೆ. ಸಂಘದಲ್ಲಿ ಸರ್ಕಾರಿ ಸೌಲಭ್ಯ ಬಗ್ಗೆ ಮಾಹಿತಿ ಪಡೆದುಕೊಂಡು ಇವರು ಯು.ಡಿ.ಐ.ಡಿ ಕಾರ್ಡ್ ಮಾಡಿಸಿಕೊಂಡಿದ್ದಾರೆ. ಮತ್ತು ಪೆನ್ಷನ್ ಸಲುವಾಗಿ ಅರ್ಜಿ ಕೂಡ ಹಾಕುತ್ತಿದ್ದಾರೆ. ಅದಕ್ಕೆ ಇವರು ಸಂಘದಿಂದ ನಮಗೆ ಯು.ಡಿ.ಐ.ಡಿ ಕಾರ್ಡ್ ಮಾಡಿಸಿಕೊಳ್ಳಲು ಮಾಹಿತಿ ನೀಡಿ ಸಹಾಯ ಮಾಡಿದ ಆರ್ಬಿಟ್ ಸಂಸ್ಥೆಗೆ ಧನ್ಯವಾದ ತಿಳಿಸಿದ್ದಾರೆ.

## “ಮಾನಸಿಕ ಅಸ್ವಸ್ಥರ ಸರ್ವೆ”



ದಿನಾಂಕ 20/11/2024 ರಂದು ಹುಮ್ನಾಬಾದ್ ತಾಲೂಕಿನ ಕೋಳಿವಾಡ ಓಣಿಯಲ್ಲಿ ಮಾನಸಿಕ ಅಸ್ವಸ್ಥರ ಸರ್ವೆ ಮಾಡಲಾಯಿತು ಒಟ್ಟು (97) ಕುಟುಂಬಗಳಿಂದ ಮಾಹಿತಿ ಪಡೆದುಕೊಳ್ಳಲಾಯಿತು. ಸರ್ವೆ ಮಾಡಿದ ನಂತರ ಎರಡು ಹೊಸ ಮಾನಸಿಕ ಅಸ್ವಸ್ಥರನ್ನು ಪತ್ತೆಹಚ್ಚಲಾಯಿತು. ಪತ್ತೆ ಹಚ್ಚಿ ಅವರ ಕುಟುಂಬದವರಿಗೆ ಮಾನಸಿಕ ಅಸ್ವಸ್ಥರಿಗಾಗಿ ಪ್ರತಿ ಬುಧವಾರ ಸರ್ಕಾರಿ ಆಸ್ಪತ್ರೆ ಹುಮ್ನಾಬಾದಲ್ಲಿ ಡಾಕ್ಟರ್ ರಿತೇಶ್ ಬರುತ್ತಾರೆ ಮತ್ತು ಮಾನಸಿಕ ಅಸ್ವಸ್ಥರಿಗೆ ಉಚಿತವಾಗಿ ತಪಾಸಣೆ ಮಾಡಿ ಒಂದು ತಿಂಗಳ ಔಷಧಿ ಕೊಡುತ್ತಾರೆ ಮತ್ತು ಅವರನ್ನು ಒಳ್ಳೆ ರೀತಿಯಿಂದ ನೋಡಿಕೊಳ್ಳುತ್ತಾರೆ ಎಂದು ಮಾಹಿತಿ ನೀಡಲಾಯಿತು.

# “ಮಹಿಳ ಸಬಲೀಕರಣ ಕಾರ್ಯಕ್ರಮಗಳು”

## “ಮಹಾ ಸಂಘ ಬಲವರ್ಧನೆ ಕುರಿತು ಮಾಹಿತಿ”



ದಿನಾಂಕ 5.11.2024 ರಂದು ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರದ ಶ್ರೀಮತಿ ಸವಿತಾ ರವರು ಮೇರಿ ಮಹಾಸಂಗದ ಮಹಿಳೆಯರಿಗೆ ಮಹಾಸಂಘ ಬಲವರ್ಧನೆ ಕುರಿತು ಮಾಹಿತಿ ನೀಡಿದರು. ಒಂದು ಮಹಾಸಂಗ ರಚನೆ ಮಾಡಬೇಕಾದರೆ 10 ಸಂಘಗಳು ಒಳಗೊಂಡಿರಬೇಕು ಆದ್ದರಿಂದ ಚೀನಕೇರ ಸೇಡೋಳ್ ಹಾಗೂ ಓತಗಿ ಗ್ರಾಮದ ಮೂರು ಹಳ್ಳಿಗಳಿಂದ ಸಂಘಗಳನ್ನು ಒಂದೇ ಕಡೆ ಸೇರ್ಪಡೆ ಮಾಡಿ, ಪ್ರತಿ ತಿಂಗಳು ತಮಗೆ ಅನುಕೂಲವಾದ ಹಳ್ಳಿಯಲ್ಲಿ ಮಹಾಸಂಗವನ್ನು ನಡೆಸಬೇಕು. ಮತ್ತು ಸದಸ್ಯರುಗಳ ಸಂಖ್ಯೆ ಹೆಚ್ಚಾಗಿರುತ್ತದೆ. ಮಹಾಸಂಗದ ಮೂಲಕ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಲ್ಲಿ ಸಹಾಯವಾಗುತ್ತದೆ. ಬಲಹೀನವಾಗಿರುವ ಸಂಘಗಳಿಗೆ ಭೇಟಿ ನೀಡುವುದರ ಮೂಲಕ ಪುನರ್ಚೇತನಗೊಳಿಸಲು ಅನುಕೂಲವಾಗುತ್ತದೆ. ಹಾಗೂ ಒಗ್ಗಟ್ಟಿನಲ್ಲಿ ಬಲವಿರುತ್ತದೆ. ಸಮಾನ ಮನಸಿನಿಂದ ಆಸಕ್ತಿಯುಳ್ಳವರು ಒಂದೇ ಗುರಿಯನ್ನು ಇಟ್ಟುಕೊಂಡು ಮಹಾಸಂಗದ ಸಭೆಯನ್ನು ನಡೆಸಬೇಕು ಎಂದು ತಿಳಿಸಿದರು.

## “ಲಿಂಗ ಭೇದಭಾವ ಮಾಡದೆ ಸಮಾನತೆ ಸೃಷ್ಟಿ ನಿರ್ಮಾಣ ಮಾಡಬೇಕು”



ದಿನಾಂಕ 06.11.2024 ರಂದು ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಸವಿತಾ ರವರು ಘಾಟಬೋರಾಳ ಗ್ರಾಮದಲ್ಲಿರುವ ಇಂದಿರಾ ಸಂಘದ ಮಹಿಳೆಯರಿಗೆ ಮಹಿಳಾ ಸಬಲೀಕರಣ ಯೋಜನೆಯ ಗುರಿ ಉದ್ದೇಶಗಳ ಕುರಿತು ತಿಳಿಸುತ್ತಾ. ಗುರಿ ಸಮರ್ಥ ಮಹಿಳೆಯರು ಸಮುದಾಯದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ನಾಯಕತ್ವವನ್ನು ಹೊಂದಿರಬೇಕು. ಉದ್ದೇಶ ರಾಜಕೀಯ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ತಾಂತ್ರಿಕ ಮತ್ತು ಪರಿಸರವಾಗಿ ಮಹಿಳೆಯರು ಮತ್ತು ಅವರ ಕುಟುಂಬದವರು ಪ್ರಯೋಜನವನ್ನು ಪಡೆದುಕೊಳ್ಳಬೇಕು. ಲಿಂಗ ಸಮಾನತೆ ಗಂಡು ಹೆಣ್ಣೆಂಬ ಭೇದಭಾವ ಮಾಡದೆ ಕುಟುಂಬ ಮತ್ತು ಸಮುದಾಯದಲ್ಲಿ ಸಮಾನತೆ ಸೃಷ್ಟಿ ನಿರ್ಮಾಣ ಮಾಡಬೇಕು. ರಾಜ್ಯ ಒಕ್ಕೂಟವು ರಚನೆಯಾಗಿದ್ದು ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸಲು ಸುಸ್ಥಿರತೆಗೆ ಕಾರ್ಯ ನಿರ್ವಹಿಸಬೇಕು. ಸಮಾನ ಮನಸ್ಕ ಸಂಘಟನೆಗಳೊಂದಿಗೆ ಉತ್ತಮವಾದ ಜಾಲಬಂಧ ಬೆಳೆಸಿಕೊಂಡು ಹಕ್ಕುಗಳಿಗಾಗಿ ಪ್ರತಿಪಾದಿಸುವಂತಿರಬೇಕು. ಹೇಗೆ ಮಹಿಳೆಯರು ಮತ್ತು ಅವರ ಕುಟುಂಬದವರು ಅಭಿವೃದ್ಧಿ ಯಾಗಬೇಕೆಂದು ಯೋಜನೆಯ ಗುರಿ ಉದ್ದೇಶಗಳಾಗಿದೆ ಎಂದು ತಿಳಿಸಿದರು. ವರದಿಗಾರರು: ಸವಿತಾ

## “ಸರಕಾರದಿಂದ ಸಿಗುವ ವಿವಿಧ ರೀತಿಯ ಸೌಲಭ್ಯವನ್ನು ಪಡೆದುಕೊಂಡ ಮಹೀಳೆ”



ಶ್ರೀಮತಿ ನೀಲಮ್ಮ ಗಂಡ ರಮೇಶ್ ಇವರು ಸೀತಾಳಗೇರಾ ಗ್ರಾಮದ ನಿವಾಸಿಯಾಗಿದ್ದು. ಇವರು ಸೂರ್ಯ ಸಂಘದಲ್ಲಿ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರ ಸಂಘಕ್ಕೆ ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಅಮಿತ ರವರು ಇವರಿಗೆ ಅನೇಕ ರೀತಿಯ ಮಾಹಿತಿ ತರಬೇತಿಗಳನ್ನು ನೀಡಿರುತ್ತಾರೆ. ಇವರು ಸರಕಾರದಿಂದ ಸಿಗುವ ವಿವಿಧ ರೀತಿಯ ಕಾರ್ಡುಗಳಾದ ಲೇಬರ್ ಕಾಡುಗಳನ್ನು ಮಾಡಿಸಿಕೊಂಡು ಇದಕ್ಕೆ 3,000 ಹಣ ಸಿಕ್ಕಿದೆ ಹಾಗೂ ಮಗಳ ವಿದ್ಯಾಭ್ಯಾಸಕ್ಕೆ 25,000 ಹಣ ಸಿಕ್ಕಿರುತ್ತದೆ ಹಾಗೆ ಜಾಬ್ ಕಾರ್ಡ್ ಮಾಡಿಸಿಕೊಂಡು ಉದ್ಯೋಗ ಖಾತ್ರಿ ಕೆಲಸ ಮಾಡಿ ಅದರಿಂದ ಬರುವ ಕೂಲಿ ಹಣವನ್ನು ಪಡೆದಿರುತ್ತಾರೆ. ಮತ್ತು ಈ ಶ್ರಮ ಕಾಡುಗಳು ಮಾಡಿಸಿಕೊಂಡಿದ್ದಾರೆ ಹಾಗೂ ಮೂರು ಜನ ಮಕ್ಕಳಿಗೆ ಹೊಸ ಗುರುತಿನ ಚೀಟಿಗಾಗಿ ಅರ್ಜಿ ಸಲ್ಲಿಸಿ ಮೂರು ಜನ ಮಕ್ಕಳ ಗುರುತಿನ ಚೀಟಿಯನ್ನು ಮಾಡಿಸಿಕೊಂಡಿದೇನೆ ಈ ಎಲ್ಲಾ ಕಾಡುಗಳಿಂದ ನನಗೆ ನನ್ನ ಕುಟುಂಬಕ್ಕೆ ಬಹಳ ಅನುಕೂಲಕರವಾಗಿದೆ. ಈ ಸೌಲಭ್ಯಗಳು ಪಡೆದುಕೊಳ್ಳಲು ಸಹಾಯ ಮಾಡಿದಂತಹ ಆರ್ಬಿಟ್ ಸಂಸ್ಥೆಗೆ ವಂದನೆಗಳನ್ನು ಸಲ್ಲಿಸುತ್ತೇನೆ.



ಶ್ರೀಮತಿ ಭಾಗ್ಯಶ್ರೀ ಗಂಡ ಡೇವಿಡ್ ಇವರು ವಡ್ಡನಕೆರೆ ಗ್ರಾಮದ ನಿವಾಸಿಯಾಗಿದ್ದು ಪ್ರತಿಭಾ ಸಂಘದಲ್ಲಿ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಇವರ ಸಂಘಕ್ಕೆ ಆರ್ಬಿಟ್ ಸಂಸ್ಥೆ ಮಹಿಳಾ ಸಬಲೀಕರಣ ಯೋಜನೆಯ ಕಾರ್ಯಕರ್ತರಾದ ಶ್ರೀಮತಿ ಅಮಿತಾ ರವರು ಅನೇಕ ಮಾಹಿತಿ ತರಬೇತಿ ನೀಡುವುದರೊಂದಿಗೆ ಪ್ಯಾನ್ ಕಾರ್ಡ್, ಕಟ್ಟಡ ಕಾರ್ಮಿಕ ಇಲಾಖೆ ಭೇಟಿ ನೀಡಿ ಲೇಬರ್ ಕಾರ್ಡ್, ಎಚ್.ಪಿ ಗ್ಯಾಸ್ ಆಫೀಸ್ ಭೇಟಿ ನೀಡಿ ಕೆವೈಸಿ ಮಾಡಿಸಿದ ಪರಿಣಾಮವಾಗಿ ಪ್ರತಿ ತಿಂಗಳು 300 ರೂಪಾಯಿ ಸಬ್ಸಿಡಿ ಹಣ ಜಮ್ಮ ಆಗುತ್ತದೆ ಹಾಗೂ ಲೈಫ್ ಇನ್ಸೂರೆನ್ಸ್ ಮಾಡಿಸಿ ಕೊಂಡಿದ್ದೇನೆ ಮತ್ತು ಗ್ರಹಲಕ್ಷ್ಮಿ ಸಹ ಮಾಡಿಸಿಕೊಂಡಿದ್ದೇನೆ. ನನಗೆ ಹಣ ಸಹ ಬರುತ್ತದೆ ಇದರಿಂದ ನನಗೆ ಈ ಸೌಲಭ್ಯಗಳು ಒದಗಿಸಿ ಕೊಟ್ಟಂತ ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳು ಸಲ್ಲಿಸುತ್ತೇನೆ. ವರದಿಗಾರರು: ಅಮೀತಾ

## “ಮಹಾಸಂಘ ಪದಾಧಿಕಾರಿಗಳಿಗೆ ಆಂತರಿಕ ಮೌಲ್ಯಮಾಪನ””



ನವೆಂಬರ್ 19 ರಂದು ಭಾತಂಬ್ರಾ ಗ್ರಾಮದಲ್ಲಿ ಆಂತರಿಕ ಮೌಲ್ಯಮಾಪನ ಸಭೆಯಲ್ಲಿ ಸಂಪನ್ಮೂಲ ವ್ಯಕ್ತಿಯಾದ ಸಿಸ್ಟರ್ ಮೇರಿ, ಸಂಯೋಜಕರು ಭಾರತಿ ಮೇಡಂ, ಕಾರ್ಯಕರ್ತರು ವರದರಾಜ್ ಸರ್ ಅವರು ಮೌಲ್ಯಮಾಪನ ಸಭೆಯಲ್ಲಿ ಮಹಾಸಂಘ, ನೈಜ ಘಟನೆ, ಸಮರ್ಥ ನಾಯಕಿ, ಕುಟುಂಬ ಭೇಟಿ ಆದಾಯದಲ್ಲಿ ತೊಡಗಿರುವ ಮಹಿಳೆಯರ ಮನೆ ಭೇಟಿ ಮಾಡುತ್ತಾ ಆಂತರಿಕ ಮೌಲ್ಯಮಾಪನ ಸಭೆಯಲ್ಲಿ ಮಾತನಾಡಿ ಅವರಿಂದಲೇ ಮಹಾಸಂಘ ಹೆಸರು, ಮಹಾಸಂಘದ ಉದ್ದೇಶ, ಮಹಾಸಂಘದಿಂದ ಮಾಡಬೇಕಾದ ಕರ್ತವ್ಯಗಳು, ಮಹಾಸಂಘದಲ್ಲಿ ಇನ್ನೊಮ್ಮೆ ಮಾಡಬೇಕಾದ ಕೆಲಸಗಳು, ಮಹಾಸಂಗಘದ ಪದಾಧಿಕಾರಿಗಳ ಮುಖಾಂತರ ಉತ್ತರಗಳನ್ನು ತಿಳಿದುಕೊಂಡರು. ನೈಜ ಘಟನೆ ಶ್ರೀಮತಿ ಸರಸ್ವತಿ ಅವರ ಜೀವನದಲ್ಲಿ ಆದ ಒಂದು ನೈಜ ಘಟನೆಯು ತುಂಬಾ ಕಷ್ಟಪಟ್ಟು ಸಂಘದಲ್ಲಿ ಸೇರಿಕೊಂಡು ಮಹಾಸಂಘದ ಮುಖಾಂತರ ಅವರು ಜೀವನದಲ್ಲಿ ಆದ ಸಮಸ್ಯೆಗಳನ್ನು ಬಗೆಹರಿಸಿಕೊಂಡಿದ್ದೇನೆ ಎಂದು ಅವರ ಅಭಿಪ್ರಾಯ ಆಂತರಿಕ ಮೌಲ್ಯಮಾಪನದಲ್ಲಿ ತಿಳಿಸಿದರು. ಸಮರ್ಥ ನಾಯಕಿ ಸಮರ್ಥವಾಗಿ ಯಾವರೀತಿಯಿಂದ ಮುಂದೆ ಬರಲು ಕಾರಣವೇನೆಂದು ಅವರ ಅಭಿಪ್ರಾಯದಲ್ಲಿ ಪ್ರಶ್ನೆಗಳ ಮುಖಾಂತರ ಅವರು ಯಾವಯಾವ ಕೆಲಸ ಮಾಡುತ್ತಾರೆ. ಯಾವ ರೀತಿಯಿಂದ ಸಮರ್ಥನ ಆಯ್ಕೆಯಾಗಿ ಮುಂದೆ ಬಂದಿದ್ದಾರೆ ಎಂದು ಅವರ ಮನಸ್ಸಿನಿಂದ ಆಂತರಿಕ ಮೌಲ್ಯಮಾಪನ ಸಭೆಯಲ್ಲಿ ವ್ಯಕ್ತಪಡಿಸಿದ್ದಾರೆ. ವರದಿಗಾರರು: ಸುಜಾತಾ

## “ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಪದಾಧಿಕಾರಿಗಳ ಪಾತ್ರ ಬಹಳ ಮಹತ್ವ”




ದಿನಾಂಕ 19 ರಂದು ಹಾಲಹಿಪ್ಪರ್ಗಾದಲ್ಲಿ ಆಂತರಿಕ ಮೌಲ್ಯಮಾಪನ ಸಭೆಗೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದಂತ ಸಿಸ್ಟರ್ ಮೇರಿ, ಭಾರತಿ ಮತ್ತು ವರದರಾಜ್. ಫಾದರ್ ವಿಜಯ್ ಕುಮಾರ್, ಮಹಿಳಾ ಸಬಲೀಕರಣದ ಸಂಯೋಜಕರಾದ ಶ್ರೀಮತಿ ನಿರ್ಮಲ ಮೇಡಂ ರವರು ಮಹಾಸಂಘದ ಗುರಿ ಉದ್ದೇಶಗಳ ಬಗ್ಗೆ ಮತ್ತು ಸಾಮಾಜಿಕ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನಿಮ್ಮ ಪಾತ್ರ ಬಹಳ ಮಹತ್ವದ ಆಗಿದೆ ಎಂದು ತಿಳಿಸಿದ್ದಾರೆ. ಮಹಾಸಂಘದಿಂದ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಸಾಧಿಸಿದ ಕೆಲಸಗಳು ಈ ಕೆಳಗಿನಂತಿವೆ ಸಿಸಿ ರಸ್ತೆ, ಚರಂಡಿ, ಕೌಟುಂಬಿಕ ಸಮಸ್ಯೆ, ಗಂಡ ಹೆಂಡತಿಯರ ಜಗಳಗಳ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ಜಗಜ್ಯೋತಿ ಮಹಾಸಂಘದಿಂದ ಸಮಸ್ಯೆಗಳನ್ನು ಬಗೆಹರಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ. ಮಂದಿರಗಳ ನಿರ್ಮಾಣವನ್ನು ಮಾಡಿಸಿದ್ದಾರೆ ಹೀಗೆ ಹಲವಾರು ಸಮಸ್ಯೆಗಳನ್ನು ಬಗೆಹರಿಸುತ್ತಾ ಸರ್ಕಾರದ ಸೌಲಭ್ಯಗಳನ್ನು ಪಡೆಯುತ್ತಿದ್ದಾರೆ ಎಂದು ತಿಳಿಸಿದಗದಗರು.

## “ತಾಲೂಕು ಒಕ್ಕೂಟದ ಗುರಿ ಮತ್ತು ಉದ್ದೇಶಗಳ ಬಗ್ಗೆ ಮಾಹಿತಿ”



ದಿನಾಂಕ 19ರಂದು ಭಾಲ್ಕಿಯಲ್ಲಿ ಆಂತರಿಕ ಮೌಲ್ಯಮಾಪನ ಸಭೆಗೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದಂತ ಸಿಸ್ಟರ್ ಮೇರಿ, ಭಾರತಿ ಮತ್ತು ವರದರಾಜ, ಪಾದರ್ ವಿಜಯ್ ಕುಮಾರ್, ಮಹಿಳಾ ಸಬಲೀಕರಣದ ಸಂಯೋಜಕರಾದ ಶ್ರೀಮತಿ ನಿರ್ಮಲ ಮೇಡಂ ಅವರು ಭಾಗವಹಿಸಿದ್ದರು, ತಾಲೂಕ ಒಕ್ಕೂಟದ ಸಭೆಗೆ 10 ಮಹಾಸಂಘದ ಪದಾಧಿಕಾರಿಗಳು ಕೂಡ ಭಾಗವಹಿಸಿದ್ದಾರು. ತಾಲೂಕು ಒಕ್ಕೂಟದ ಗುರಿ ಮತ್ತು ಉದ್ದೇಶಗಳ ಬಗ್ಗೆ ಮಾಹಿತಿಯನ್ನು ತಿಳಿಸಿದ್ದಾರೆ ಗುರಿ ಎಂದರೆ ಮಹಾಸಂಗದಲ್ಲಿ ಸಮಸ್ಯೆಯನ್ನು ಮಹಾಸಂಘದಿಂದ ಬಗೆಹರಿಸದಿದ್ದರೆ ಆ ಸಮಸ್ಯೆಯನ್ನು ನಾವು ತಾಲೂಕ ಒಕ್ಕೂಟಗಳಿಂದ ಬಗೆಹರಿಸಬಹುದು ಮತ್ತು ತಾಲೂಕ ಒಕ್ಕೂಟಗಳಿಂದ ಬಗೆಹರಿಸಿದ ಕೆಲಸ ಕಾರ್ಯಗಳು ಬಗೆಹರಿಯದಿದ್ದರೆ ಜಿಲ್ಲಾ ಒಕ್ಕೂಟಗಳಿಂದ ಬಗೆಹರಿಸಬಹುದು ಎಂದು ಅವರು ವ್ಯಕ್ತಪಡಿಸಿದ್ದಾರೆ. ಕೊಡಬೇಕಾದಂತ ತರಬೇತಿಗಳು ಆರೋಗ್ಯ ಸರ್ಕಾರದ ಸೌಲಭ್ಯಗಳು ಸ್ವ ಉದ್ಯಮಿಗಳ ಬಗ್ಗೆ ನಾಯಕತ್ವದ ತರಬೇತಿಗಳನ್ನು ಕೊಡಬಹುದು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ವರದಿಗಾರರು: ಪ್ರಭಾವತಿ

## “ಇಂದಿನ ಮಕ್ಕಳು ನಾಳಿನ ಪ್ರಜೆಗಳು”



ದಿನಾಂಕ 27ರಂದು ಮಕ್ಕಳ ದಿನಾಚರಣೆ ಆಚರಿಸಲಾಯಿತು ಯರಂಡಿ ಗ್ರಾಮದಲ್ಲಿ. ಸಂಪನ್ಮೂಲ ವ್ಯಕ್ತಿಗಳಾದ ಸಿಸ್ಟರ್ ಎಡ್ನಾರವರು ಚಟುವಟಿಕೆಗಳ ಮುಖಾಂತರ ಮಕ್ಕಳನ್ನು ಸಂತೋಷಗೊಳಿಸಿ ಬಹುಮಾನಗಳನ್ನು ವಿತರಿಸಲಾಯಿತು. ಹಾಗೂ ಮಕ್ಕಳನ್ನು ಉದ್ದೇಶಿಸಿ ಇಂದಿನ ಮಕ್ಕಳು ಇಂದಿನ ಪ್ರಜೆಗಳು ಆದಕಾರಣ ತಾವುಗಳು ಒಳ್ಳೆ ಸಂಸ್ಕಾರಗಳನ್ನು ಬೆಳೆಸಿ ಉತ್ತಮ ರೀತಿಯ ವಿದ್ಯಾರ್ಥಿಗಳ ಆಗಬೇಕೆಂದು ತಿಳಿಸುತ್ತಾ ಪ್ರೋತ್ಸಾಹಿಸಿ ಮಕ್ಕಳನ್ನು ಗುರು ಹಿರಿಯರಿಗೆ ಗೌರವ ನೀಡಲು ತಿಳಿಸಿದರು. ನವಂಬರ್ 14ರಂದು ಯಾವ ದಿನ ಯಾವ ರೀತಿಯಲ್ಲಿ ಆಚರಿಸಬೇಕು ಎನ್ನುವುದರ ಬಗ್ಗೆ ಮನದಟ್ಟಾಗಿ ತಿಳಿಸಿದರು.

## “ಮಹಾಸಂಘದ ಮಹೀಳೆಯರು ಒಳ್ಳೆಯ ನಾಯಕಿಯರು ಆಗಬೇಕು”




ದಿನಾಂಕ 19 ರಂದು ಲಕ್ಷ್ಮೀನಾರಾಯಣ್ ಕಾಲೋನಿಯ ದಿವ್ಯಜ್ಯೋತಿ ಮಹಾಸಂಘದ ಆಂತರಿಕ ಮೌಲ್ಯಮಾಪನ ಸಭೆಯಲ್ಲಿ ಹುಲುಸೂರ್ ತಾಲೂಕಿನ ಗ್ರಾಮ ಪಂಚಾಯಿತಿ ಜೆ.ಡಿ.ಎಸ್ ಅಧ್ಯಕ್ಷರಾದ ಶ್ರೀ ಶರಣಪ್ಪ ಸರ್ (ಅನಿಲ್) ಪರೆಪ್ಪ ರವರು ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಈ ಸಭೆಗೆ ಮೂಲ ಕಾರಣವಾದ ಆರ್ಬಿಟ್ ಸಂಸ್ಥೆ ಸುಮಾರು 30 ವರ್ಷಗಳಿಂದ ಈ ಒಂದು ಯೋಜನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ತುಂಬಾ ಸಂತೋಷ ವ್ಯಕ್ತಪಡಿಸಿದರು. ಸಂಘ ಮಹಾಸಂಘಗಳಿಂದ ಹಲವಾರು ಮಹಿಳೆಯರು ನಾಯಕತ್ವ ಹಾಗೂ ಸ್ವ-ಉದ್ಯೋಗದಲ್ಲಿ ತೊಡಗಿಕೊಂಡು ಉತ್ತಮ ಜೀವನ ನಡೆಸುವಲ್ಲಿ ಮುಂದಾಗಿದ್ದಾರೆ. ಅದೇ ರೀತಿಯಲ್ಲಿ ತಾವುಗಳು ಬೆಳೆದು ತಮ್ಮ ಕುಟುಂಬಗಳನ್ನು ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಬೆಳೆಸಬೇಕೆಂದು ತಿಳಿಸಿ. ಒಳ್ಳೆಯ ನಾಯಕಿಯರು ಆಗಬೇಕೆಂದು ತಿಳಿಸಿ. ಈ ಒಂದು ಯೋಜನೆಯ ಗುರಿ ಉದ್ದೇಶಗಳನ್ನು ಅನುಸರಿಸಲು ತಿಳಿಸಿದರು. ವರದಿಗಾರರು: ಚಂದ್ರಕಲಾ

## “ಸ್ವ-ಸಹಾಯ ಸಂಘದ ಮಹಿಳೆಯರಿಗೆ ಪೋಷಕತ್ವದ ಕುರಿತು ತರಬೇತಿ”



ದಿನಾಂಕ: 27-11-2024 ರಂದು ಔರಾದ ತಾಲ್ಲೂಕಿನ ಉಜಿನಿ ಗ್ರಾಮದಲ್ಲಿ ಸ್ವ-ಸಹಾಯ ಸಂಘದ ಮಹಿಳೆಯರಿಗೆ ಪೋಷಕತ್ವದ ಕುರಿತು ತರಬೇತಿಯನ್ನು ನೀಡಲಾಯಿತು. ಇದರಲ್ಲಿ ತಂದೆ-ತಾಯಿ ಇಲ್ಲದ ಹೆಣ್ಣು ಮಗುವಿಗೆ ಇರುವ ಸೌಲತ್ತುಗಳ ಕುರಿತು ಮಾಹಿತಿ ನೀಡಲಾಯಿತು. ಏಕ ಪೋಷಕ ಇರುವ ಮಗುವಿನ ಸವಲತ್ತುಗಳ ಕುರಿತು ಮಾಹಿತಿಯನ್ನು ನೀಡಲಾಯಿತು, ಕಾರ್ಯಕ್ರಮದಲ್ಲಿ 15 ಜನ ಮಹಿಳೆಯರು ಭಾಗವಹಿಸಿದ್ದರು, ಸಂಪನ್ಮೂಲ ವ್ಯಕ್ತಿಗಳಾಗಿ ಶ್ರೀ ಸೀನಪ್ಪ ಸರ್ಕುರೆ ಹಾಗೂ ಆರ್ಬಿಟ್ ಸಂಸ್ಥೆಯ ಕೌಶಲ್ಯ ತರಬೇತಿ ಯೋಜನೆಯ ಸಂಯೋಜಕರಾದ ಶ್ರೀ ಸುಭಾಷ ಮನಕರೆ ಭಾಗವಹಿಸಿದ್ದರು.

ವರದಿಗಾರರು: ಸುಭಾಶ

## “ಗಾಂಧಿನಗರ ಕೇಂದ್ರದಲ್ಲಿ ಎರಡು ತಿಂಗಳ ಕೌಶಲ್ಯ ಅಭಿವೃದ್ಧಿ ತರಬೇತಿ”





ಕಾರಿತಾಸ್ ಇಂಡಿಯಾ ಮತ್ತು ಆರ್ಬಿಟ್ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿ ಹುಮ್ನಾಬಾದ್ ತಾಲೂಕಿನ ಗಾಂಧಿನಗರ ಕೇಂದ್ರದ ಫಲಾನುಭವಿಗಳಿಗೆ ಎರಡು ತಿಂಗಳ ಟೈಲರಿಂಗ್ ತರಬೇತಿಯನ್ನು ನೀಡಲಾಗಿತ್ತು. ಈ ತರಬೇತಿಯಲ್ಲಿ 15 ಮಹಿಳೆಯರು ಭಾಗವಹಿಸಿ ಬಟ್ಟೆ ಹೊಲಿಯುವುದನ್ನು ಕಲಿತುಕೊಂಡಿದ್ದಾರೆ. ಈಗ ಶ್ರೀಮತಿ ಮಮತಾ ಮತ್ತು ಪ್ರೇಮಲ ಅವರು ಬ್ಲೌಸ್ ಫ್ರಾಕ್ ಹೊಲೆಯುವುದನ್ನು ಕಲಿತುಕೊಂಡು ಮನೆಯಲ್ಲಿ ಮಷೀನ್ ಅನ್ನು ಕರೆದಿಮಾಡಿ ಇವಾಗ ಸಂಪಾದನೆ ಮಾಡುತ್ತಿದ್ದಾರೆ. ಇಂತಹ ಒಂದು ಕೌಶಲ್ಯ ಅಭಿವೃದ್ಧಿ ತರಬೇತಿಯನ್ನು ನೀಡಿದ ಕಾರಿತಾಸ್ ಇಂಡಿಯಾ ಹಾಗೂ ಆರ್ಬಿಟ್ ಸಂಸ್ಥೆಗೆ ಧನ್ಯವಾದಗಳು ಸಲ್ಲಿಸಿದ್ದಾರೆ. ವರದಿಗಾರರು: ಶ್ರೀಮತಿ ರಿಟಾ.

## “ಕ್ಯಾನ್ಸರ್ ಅರಿವಿನ ಕಾರ್ಯಕ್ರಮ”

ಸರಕಾರಿ ಪ್ರೌಢಶಾಲೆ ಯನಗುಂದಾ ಕ್ಯಾನ್ಸರ್ ಅರಿವಿನ ಕಾರ್ಯಕ್ರಮವನ್ನು ಆಯೋಜಿಸಲಾಯಿತು, ಕಾರ್ಯಕ್ರಮದಲ್ಲಿ ಆರ್ಬಿಟ್ ಸಂಸ್ಥೆಯ ಕೌಶಲ್ಯ ತರಬೇತಿ ಯೋಜನೆಯ ಸಂಯೋಜಕರಾದ ಶ್ರೀ ಸುಭಾಷ ಮಾನಕರೆಯವರು ಕ್ಯಾನ್ಸರನ ಪ್ರಕಾರಗಳು, ಲಕ್ಷಣಗಳು ಹಾಗೂ ತಡೆಗಟ್ಟುವ ವಿಧಾನಗಳ ಕುರಿತು ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ 57 ವಿದ್ಯಾರ್ಥಿಗಳು ಹಾಗೂ 03 ಶಿಕ್ಷಕರು ಭಾಗವಹಿಸಿದ್ದರು.





# "ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮ"

## "ಬೆಳವಣಿಗೆ ಕುಂಠಿತ ಮಕ್ಕಳ ಪೋಷಕರ ಬಲವರ್ಧನೆ ಕಾರ್ಯಕ್ರಮ"



ನವೆಂಬರ್ 22ರಂದು ಹುಮ್ನಾಬಾದ್ ನಗರದ ಹೊರವಲಯದಲ್ಲಿ ಇರುವಂತಹ ಆರ್ಬಿಟ್ ಸಂಸ್ಥೆ ಸಭಾಂಗಣದಲ್ಲಿ ಆರ್ಬಿಟ್ ಸಂಸ್ಥೆ ಮತ್ತು ಎ.ಪಿ.ಡಿ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕ್ರಮದ ಅಡಿಯಲ್ಲಿ ಬೆಳವಣಿಗೆ ಕುಂಠಿತ ಮಕ್ಕಳ ಪೋಷಕರ ಬಲವರ್ಧನೆ ಕಾರ್ಯಕ್ರಮ ನಡೆಸಲಾಯಿತು. ಸಂಸ್ಥೆ ಸುಮಾರು 30 ವರ್ಷ ಸಮಾಜ ಸೇವೆ ಮಾಡುತ್ತಿದ್ದು, ಬೆಳವಣಿಗೆ ಕುಂಠಿತ, ಮಕ್ಕಳಿಗೆ ವಿಶೇಷವಾದ ಆರೈಕೆ ಅವಕಾಶಕತೆ ಇದೆ, ಪೋಷಕರು ಇಂತಹ ಮಕ್ಕಳಿಗೆ ಪ್ರೀತಿ, ವಾತ್ಸಲ್ಯ ಮತ್ತು ಅವಕಾಶಗಳನ್ನು ನೀಡುವುದರಿಂದ ಮಗುವಿನ ಜೀವನ ಉತ್ತಮಗೊಳಿಸಲು ಸಹಾಯವಾಗುತ್ತದೆ ಎಂದು ಮಾತನಾಡಿದರು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾದ ಶ್ರೀ ಧನಂಜಯ್ ರವರು ಕಾರ್ಯಕ್ರಮ ಕುರಿತು ಮಾತನಾಡುತ್ತಾ ಕುಟುಂಬ ಸದಸ್ಯರ ಬೆಳವಣಿಗೆ ಕುಂಠಿತ ಮಕ್ಕಳನ್ನು ಒಳ್ಳೆಯ ವಾತಾವರಣ ಕಲ್ಪಿಸುವುದರಿಂದ ಮಗುವಿನಲ್ಲಿ ಬದಲಾವಣೆ ಕಾಣಬಹುದು ಅದರ ಜೊತೆಗೆ ಕುಟುಂಬದಲ್ಲಿ ಅವಕಾಶಗಳನ್ನು ನೀಡಬೇಕೆಂದು ತಿಳಿಸಿದರು. ಈ ಕಾರ್ಯಕ್ರಮದಲ್ಲಿ ಒಟ್ಟು 30 ಜನರು ಭಾಗವಹಿಸಿ ಇದರ ಉಪಯೋಗ ಪಡೆದುಕೊಂಡಿದ್ದರು.

ವರದಿಗಾರರು: ಮಮತಾ

## "ಬೇಬಿ ಸ್ಕ್ರೀನಿಂಗ್ ಸರಕಾರದ ಸೌಲಭ್ಯಗಳು"

ನವೆಂಬರ್ 26/2024 ರಂದು ಹುಮ್ನಾಬಾದ್ ತಾಲೂಕಿನ ಜಲಸಂಗಿ ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತೆ ಶ್ರೀಮತಿ ಕವಿತಾ ರವರು 20 ಮಕ್ಕಳಿಗೆ ಸ್ಕ್ರೀನಿಂಗ್ ಹಾಗೂ ಮೂರು ಮಕ್ಕಳಿಗೆ ಚಟುವಟಿಕೆ ಮಾಡಿಸಲಾಯಿತು. ಜಲಸಂಗಿ ಗ್ರಾಮದ ಮಗುವಿಗೆ ಸರಕಾರದಿಂದ ಯು.ಡಿ.ಐ.ಡಿ ಕಾರ್ಡ್, ಒಂದು ಮಗುವಿಗೆ ಆಧಾರ ಕಾರ್ಡ್ ಮಾಡಿಸಲಾಯಿತು. ಸರಕಾರದ ಸೌಲಭ್ಯವನ್ನು ಪಡೆದುಕೊಂಡಿರುವಂತಹ ಮಗುವಿನ ಪೋಷಕರು ನಮ್ಮ ಮಗುವಿಗೆ ಆರ್ಬಿಟ್ ಸಂಸ್ಥೆಯವರು ಬಹಳ ಸಹಾಯಕಾರಿಯಾಗಿದ್ದಾರೆ ಎಂದು ಧನ್ಯವಾದಗಳು ವ್ಯಕ್ತಪಡಿಸಿದ್ದಾರೆ.



ವರದಿಗಾರರು: ಕವಿತಾ

## "ಸಾಂಕ್ರಾಮಿಕ ಕಾಯಿಲೆಗಳು ಅಂಟಿಕೊಳದಂತೆ ಉತಮ ಆರೋಗ್ಯದಿಂದಿರೋಣ"



ನಮ್ಮ ಶೌಚಾಲಯ ನಮ್ಮ ಸ್ವಾಭಿಮಾನ ನವೆಂಬರ್ 25ರಂದು ಹುಮ್ನಾಬಾದ್ ತಾಲೂಕಿನ ಓತಗಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ಶೌಚಾಲಯ ಕುರಿತು ಜಾಗೃತಿ ಅಭಿಯಾನ ಹಮ್ಮಿಕೊಳ್ಳಲಾಯಿತು. ಈ ಕಾರ್ಯಕ್ರಮದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕಾರ್ಯಕರ್ತರಾದ ಶ್ರೀ ಸೂರ್ಯಕಾಂತ್ ಭಾಗವಹಿಸಿ ಮಾಹಿತಿನ ನೀಡಲಾಯಿತು. ಈ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯ ಗುರುಗಳು ಸಿಬ್ಬಂದಿ ವರ್ಗದವರು ಹಾಗೂ ಮಕ್ಕಳು ಭಾಗವಹಿಸಿದ್ದರು. ಭಾರತದಲ್ಲಿ 2014ರಿಂದ 2024ರ ವರೆಗೆ ಸುಮಾರು 10.83 ಕೋಟಿ ಶೌಚಾಲಯ ನಿರ್ಮಿಸಲಾಗಿದೆ. 2021 ಮತ್ತು 22ನೇ ಸಾಲಿನಲ್ಲಿ 91 ಲಕ್ಷ ಶೌಚಾಲಯಗಳ ನಿರ್ಮಿಸಲಾಗಿದೆ. ಶೌಚಾಲಯವನ್ನು ಏಕೆ ಬಳಸಬೇಕು? ನಮ್ಮ ಘನತೆಯನ್ನು ಕಾಪಾಡೋದು ಉತ್ತಮ ಆರೋಗ್ಯದಿಂದ ಕೂಡಿರುವುದು. ಸುರಕ್ಷಿತ ಮತ್ತು ಭದ್ರತೆಯಿಂದ ಇರುವ ಸಲುವಾಗಿ ಶೌಚಾಲಯ ಬಳಸುವುದು. ಶೌಚಾಲಯ ಕಟ್ಟಿಸಿ ಬಳಸಿ ನಿರ್ವಹಿಸಿ ಆರೋಗ್ಯದಿಂದಿರಿ ಎಂದು ಮಾಹಿತಿಯನ್ನು ನೀಡಿದರು. ಬಯಲು ಶೌಚಕ್ಕೆ ಹೋಗುವುದರಿಂದ ಅನೇಕ ರೀತಿಯ ಖಾಯಿಲೆಗಳು ರೋಗ ರುಜಿನಗಳು ಹಾಗೂ ಸಾಂಕ್ರಾಮಿಕ ಕಾಯಿಲೆಗಳು ಅಂಟಿಕೊಳ್ಳುತ್ತವೆ ಆದ್ದರಿಂದ ಬಯಲ ಮುಕ್ತ ಶೌಚಾಲಯ ಮಾಡೋದು ನಮ್ಮ ನಿಮ್ಮೆಲ್ಲರ ಪ್ರಮುಖವಾಗಿರುವಂತಹ ಗುರಿಯಾಗಿರಬೇಕು ಎಂದು ಮಾಹಿತಿಯನ್ನು ನೀಡಲಾಯಿತು.

ವರದಿಗಾರರು: ಸೂರ್ಯಕಾಂತ್

# “ನವಜೀವನ (ಎಲ್.ಎಲ್.ಎಲ್.ಎಫ್) ಕಾರ್ಯಕ್ರಮ”

## “ಕ್ಯಾನ್ಸರ್ ಕಾಯಿಲೆಯ ಬಗ್ಗೆ ಅರಿವು”



ದಿನಾಂಕ 11/11/2024 ರಂದು ಬಸವಕಲ್ಯಾಣ್ ತಾಲೂಕಿನ ಮಂಟಲ್ ಗ್ರಾಮದ ಸರಕಾರಿ ಪ್ರೌಢ ಶಾಲೆಯ ಮಕ್ಕಳಿಗೆ ಕ್ಯಾನ್ಸರ್ ಕಾಯಿಲೆಯ ಬಗ್ಗೆ ಆರ್ಬಿಟ್ ಸಂಸ್ಥೆಯ ಲಿವ್.ಲವ್.ಲಾಫ್ ಕಾರ್ಯಕ್ರಮದ ಕಾರ್ಯಕರ್ತೆಯಾದ ಶ್ರೀಮಂತಿ ಸುಜಾತ ಅವರು ಮಾತನಾಡಿ ಕ್ಯಾನ್ಸರ್ ಕಾಯಿಲೆ ಹೇಗೆಲ್ಲ ನಮ್ಮನ್ನು ಸೇರಬಹುದು ಹಾಗೂ ಕಾಡಬಹುದು ಎಂದು ಅದಕ್ಕೆ ಪರ್ಯಾಯ ಮಾರ್ಗಗಳ ಬಗ್ಗೆ ತಿಳಿಸಲಾಯಿತು. ಕ್ಯಾನ್ಸರ್ ಕಾಯಿಲೆಯಲ್ಲಿ ಅನೇಕ ರೀತಿಯ ಲಕ್ಷಣಗಳಿವೆ ಮೊದಲನೆಯದಾಗಿ ಬಾಯಲ್ಲಿ ಸಣ್ಣ ಸಣ್ಣ ಗುಳ್ಳೆಗಳಾಗುವುದು, ದೇಹವು ನಿಷಕ್ತಿಗೊಳ್ಳುವುದು ತುಂಬಾ ಆಯಸ್ಸು, ಊಟ ಸರಿಯಾಗಿ ಸೇರದೆ ಇರುವುದು ಹೀಗೆ ಅನೇಕ ರೀತಿಯ ಲಕ್ಷಣಗಳನ್ನು ನಾವು ಕಂಡರೆ ತಕ್ಷಣವೇ ವೈದ್ಯರ ಬಳಿ ಹೋಗಿ ಚಿಕಿತ್ಸೆ ಪಡೆಯಬೇಕು. ಹೀಗೆ ನಿಮ್ಮ ಸುತ್ತಮುತ್ತಲು ಯಾರಾದರೂ ತಂಬಾಕು ಸಿಗರೇಟ್ ಬೀಡಿ, ಗುಟುಕ, ಸರಾಯಿ ಇಂಥ ಕೆಟ್ಟ ಚಟಗಳಿಗೆ ಒಳಗಾದರೆ ಅಂತ ವ್ಯಕ್ತಿಗಳಿಗೆ ತಿಳಿಸಬೇಕು ಎಂದು ಕ್ಯಾನ್ಸರ್ ಕಾಯಿಲೆಯ ಬಗ್ಗೆ ಅರಿವು ಮೂಡಿಸುತ್ತಾ, ಮಕ್ಕಳಿಗೆ ಸರಿಯಾಗಿ ಮಾಹಿತಿ ಕೊಡಲಾಯಿತು. ಶಿಕ್ಷಕರು ಮತ್ತು ಮಕ್ಕಳು ಸೇರಿ ಒಟ್ಟು 122 ಜನರು ಭಾಗವಹಿಸಿದ್ದರು. ವರದಿಗಾರರು: ಸುಜಾತಾ

## “ಮಾನಸಿಕ ಆರೋಗ್ಯ ಮತ್ತು ಕ್ಯಾನ್ಸರ್ ಬಗ್ಗೆ ಜಾಗೃತಿ”



ದಿನಾಂಕ: 21/11/2024ರಂದು ಭಾಲ್ಕಿ ತಾಲೂಕು ಯಣಕೂರ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಕಾರ್ಯಕರ್ತರಾದ ಕುಮಾರ್ ರವರು ಮಾನಸಿಕ ಆರೋಗ್ಯ ಮತ್ತು ಕ್ಯಾನ್ಸರ್ ಬಗ್ಗೆ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮಾನಸಿಕ ರೋಗ ಎಂದರೇನು? ಮಾನಸಿಕ ರೋಗಕ್ಕೆ ಕಾರಣಗಳು, ಮಾನಸಿಕ ಕಾಯಿಲೆಗಳ ಲಕ್ಷಣಗಳು ಹಾಗೂ ಮಾನಸಿಕ ರೋಗಕ್ಕೆ ಲಭ್ಯವಿರುವ ಚಿಕಿತ್ಸೆ ಕುರಿತು ವಿವರಿಸಲಾಯಿತು. ಮಾನಸಿಕ ಕಾಯಿಲೆ ಮೆದುಳಿನ ಕಾಯಿಲೆ ಆಗಿದ್ದು, ಯಾರೂ ಮೂಢನಂಬಿಕೆಗೆ ಒಳಗಾಗದೆ ತಕ್ಷಣವೇ ವೈದ್ಯಕೀಯ ಚಿಕಿತ್ಸೆ ಪಡೆಯುವುದು ಅಗತ್ಯವೆಂದು ತಿಳಿಸಲಾಯಿತು. ಅದೇ ರೀತಿ ಕ್ಯಾನ್ಸರ್ ಕಾಯಿಲೆ ಅದು ಹೇಗೆ ಉಂಟಾಗುತ್ತದೆ? ಅದನ್ನು ಪ್ರಾರಂಭದ ಹಂತದಲ್ಲಿಯೇ ಪತ್ತೆಹಚ್ಚುವುದು ಹೇಗೆ? ಈ ಬಗ್ಗೆ ಮಕ್ಕಳಿಗೆ ಸಮಗ್ರ ಮಾಹಿತಿ ನೀಡಲಾಯಿತು. ಭಾಲ್ಕಿ ತಾಲ್ಲೂಕಿನಲ್ಲಿ ಪ್ರತಿ ತಿಂಗಳು ಎರಡನೇ ಮಂಗಳವಾರ DMHP (District Mental Health Programme) ಶಿಬಿರ ನಡೆಯುತ್ತದೆ ಎಂಬ ಮಾಹಿತಿಯನ್ನೂ ನೀಡಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 36 ಜನ ವಿದ್ಯಾರ್ಥಿಗಳು ಭಾಗವಹಿಸಿದ್ದರು.



ದಿನಾಂಕ 08/11/2024 ರಂದು ಭಾಲ್ಕಿ ತಾಲೂಕಿನ ಚಳಕಾಪುರ ಗ್ರಾಮದ ಸರಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ನವಜೀವನ (LLLF) ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ್ ರವರಿಂದ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ರೋಗ ಎಂದರೇನು? ಮಾನಸಿಕ ರೋಗಕ್ಕೆ ಕಾರಣ, ಅದರ ಲಕ್ಷಣಗಳು ಮತ್ತು ಚಿಕಿತ್ಸೆಯ ಬಗ್ಗೆ ಅವರಿಗೆ ತಿಳಿಸಲಾಯಿತು. ಹಲವಾರು ಜನರು ಮೂಢನಂಬಿಕೆಗೆ ಒಳಗಾಗಿ ಮಾನಸಿಕ ಆರೋಗ್ಯವನ್ನು ಕಡೆಗಣಿಸುತ್ತಾರೆ ಎಂದು ಕಾಯಿಲೆಯ ಆರಂಭದ ಸ್ಥಿತಿಯನ್ನು ಪತ್ತೆಹಚ್ಚಿ ಅವರನ್ನು ಪ್ರತಿ ಮಂಗಳವಾರ ಸರ್ಕಾರಿ ಆಸ್ಪತ್ರೆಯಲ್ಲಿ ದೊರಕುವ ಉಚಿತ ಚಿಕಿತ್ಸೆಯ ಬಗ್ಗೆ ಮಾಹಿತಿ ನೀಡಲಾಯಿತು. ಜೊತೆಗೆ ಅತಿ ವೇಗವಾಗಿ ಎಲ್ಲರಲ್ಲೂ ಕಾಣಿಸಿಕೊಳ್ಳುತ್ತಿರುವ ಕ್ಯಾನ್ಸರ್ ಕಾಯಿಲೆಯನ್ನು ಮೊದಲ ಹಂತದಲ್ಲಿ ಪತ್ತೆ ಹಚ್ಚುವ ಕೆಲವು ವಿಧಾನಗಳ ವಿಷಯವಾಗಿ ಅರಿವು ಮೂಡಿಸಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 36 ಶಾಲೆಯ ವಿದ್ಯಾರ್ಥಿ ವಿದ್ಯಾರ್ಥಿನಿಯರು ಹಾಗೂ ಇಬ್ಬರು ಸಹಶಿಕ್ಷಕರು ಉಪಸ್ಥಿತರಿದ್ದರು.



ದಿನಾಂಕ 20/11/2024 ರಂದು ಭಾಲ್ಕಿ ತಾಲೂಕಿನ ತೂಗಾಂವ್ ಗ್ರಾಮದ ಸರಕಾರಿ ಪ್ರಾಥಮಿಕ ಶಾಲೆ ಮಕ್ಕಳಿಗೆ ನವಜೀವನ (LLLF) ಕಾರ್ಯಕ್ರಮದ ಕಾರ್ಯಕರ್ತರಾದ ಕುಮಾರ್ ರವರಿಂದ ಮಾನಸಿಕ ಅಸ್ವಸ್ಥತೆ ಮತ್ತು ಕ್ಯಾನ್ಸರ್ ಕುರಿತು ಅರಿವು ಮೂಡಿಸಲಾಯಿತು. ಮಾನಸಿಕ ರೋಗ ಎಂದರೇನು? ಮಾನಸಿಕ ರೋಗಕ್ಕೆ ಕಾರಣ, ಮಾನಸಿಕ ಕಾಯಿಲೆ ಲಕ್ಷಣಗಳು ಮತ್ತು ಚಿಕಿತ್ಸೆ ಬಗ್ಗೆ ಅರಿವು ಮೂಡಿಸಲಾಯಿತು. ಜೊತೆಯಲ್ಲಿ ಕ್ಯಾನ್ಸರ್ ಕಾಯಿಲೆಯು ಹೇಗೆ ಬರುತ್ತದೆ ಮತ್ತು ಅದನ್ನು ಪತ್ತೆ ಹಚ್ಚುವ ನಿಧಾನವನ್ನು ತಿಳಿಸಲಾಯಿತು. ಮಾನಸಿಕ ಕಾಯಿಲೆಯ ಬಗ್ಗೆ ಮಾಹಿತಿ ನೀಡಿ ಯಾರು ಮೂಡ ನಂಬಿಕೆಗೆ ಒಳಗಾಗದೆ ಚಿಕಿತ್ಸೆ ಪಡೆದುಕೊಳ್ಳಬೇಕೆಂದು ಹೇಳಲಾಯಿತು. ಹಾಗೂ ಪ್ರತಿ ತಿಂಗಳು ಎರಡನೆ ಮಂಗಳವಾರ ಭಾಲ್ಕಿಯಲ್ಲಿ DMHP camp ಇರುತ್ತದೆ ಎಂದು ಹೇಳಲಾಯಿತು. ಈ ಜಾಗೃತಿ ಕಾರ್ಯಕ್ರಮದಲ್ಲಿ ಒಟ್ಟು 45 ಜನ ಶಾಲೆಯ ಮಕ್ಕಳು 2 ಸಹಶಿಕ್ಷಕರು ಉಪಸ್ಥಿತರಿದ್ದರು. ವರದಿಗಾರರು: ಕುಮಾರ್

## “ಮಾನಸಿಕ ಅಸ್ವಸ್ಥ ಫಲಾನುಭವಿಗಳ ಆರೈಕೆದಾರರ ದಿನಾಚರಣೆ”



ಭಾಲ್ಕಿ ತಾಲೂಕಿನ ಸಿದ್ದಾಪುರವಾಡಿ ಗ್ರಾಮದಲ್ಲಿ ನವೆಂಬರ್ 14ರಂದು ಮಾನಸಿಕ ಅಸ್ವಸ್ಥ ಫಲಾನುಭವಿಗಳ ಆರೈಕೆದಾರರ ದಿನಾಚರಣೆ ಆಯೋಜಿಸಲಾಯಿತು. ಈ ದಿನದ ವಿಶೇಷ ಕಾರ್ಯಕ್ರಮದಲ್ಲಿ, ಫಲಾನುಭವಿಗಳಿಗೆ ಸೇವೆ ಸಲ್ಲಿಸುತ್ತಿರುವ ಆರೈಕೆದಾರರಿಗೆ ತಮಗೆ ಸಲ್ಲುವ ಗೌರವ ಹಾಗೂ ಕೃತಜ್ಞತೆಗಳನ್ನು ವ್ಯಕ್ತಪಡಿಸಲಾಯಿತು. ಅವರ ಸೇವೆ ಸರಳವಾದದ್ದಲ್ಲ, ನೀವು ತೋರಿಸುತ್ತಿರುವ ಕಾಳಜಿಯಿಂದ ಫಲಾನುಭವಿಗಳು ಸಂಪೂರ್ಣವಾ ಗುಣಮುಖರಾಗುತ್ತಾರೆ" ಎಂಬ ಪ್ರೋತ್ಸಾಹಕರ ಸಂದೇಶವನ್ನು ಹಂಚಿಕೊಳ್ಳಲಾಯಿತು. ಆರೈಕೆದಾರರ ಅಪಾರ ಕಠಿಣ ಪರಿಶ್ರಮವನ್ನು ಮೆಚ್ಚಿ, ಅವರಿಗೆ ಅಭಿನಂದನೆಗಳು ಸಲ್ಲಿಸಲಾಯಿತು. ನಿಮ್ಮ ಕರ್ತವ್ಯ ನಿಸ್ವಾರ್ಥ ಮತ್ತು ಮಾದರಿಯಾಗಿದ್ದು, ನಿಮಗೆ ಸದಾ ನಮ್ಮ ಸಹಕಾರ ಲಭ್ಯವಿರುತ್ತದೆ ಎಂಬ ಭರವಸೆಯನ್ನು ನೀಡಲಾಯಿತು. ಅರ್ಬಿಟ್ ಸಂಸ್ಥೆ ಸಮಾಜಮುಖಿ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದು, ಆರೈಕೆದಾರರ ಸೇವೆ ಮತ್ತು ಕಾಳಜಿಗೆ ವಿಶೇಷವಾಗಿ ಕೃತಜ್ಞತೆ ಸಲ್ಲಿಸಿತು. ನೀವು ಸಾಮಾಜಿಕ ಕಾರ್ಯದಲ್ಲಿ ಪಾಲುದಾರರಾಗಿದ್ದು, ನಿಮ್ಮ ಕರ್ತವ್ಯವನ್ನು ನಿರ್ವಹಿಸುತ್ತೀರಿ ಎಂಬಂತೆ ಅವರಿಗೆ ಪ್ರೋತ್ಸಾಹ ನೀಡಲಾಯಿತು. ಈ ಕಾರ್ಯಕ್ರಮದ ಮೂಲಕ ಫಲಾನುಭವಿಗಳ ಆರೈಕೆದಾರರ ಪಾತ್ರದ ಮಹತ್ವವನ್ನು ಮಾತ್ರವಲ್ಲ, ಅವರ ಶ್ರದ್ಧಾ ಮತ್ತು ಸೇವೆಯನ್ನು ಭಾವನೆಪೂರ್ಣವಾಗಿ ಗುರುತಿಸಲಾಗಿದ್ದು, ಮುಂದಿನ ಕೆಲಸಗಳಿಗೆ ಶಕ್ತಿಯನ್ನು ತುಂಬುವ ಪ್ರಯತ್ನ ನಡೆಯಿತು. ಈ ಕಾರ್ಯಕ್ರಮದಲ್ಲಿ 05 ಆರೈಕೆದಾರರ ಬಾಗವಹಿಸಿದರು.

ವರದಿಗಾರರು: ಅಶ್ವಿನಿ

## “ಮಾನಸಿಕ ಆರೋಗ್ಯ ಕುರಿತು ಜಾಗೃತಿ”



ದಿನಾಂಕ 29.11.2024ರಂದು ಶಾಮರಾಜಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆಯ ಕಾರ್ಯಕರ್ತರಾದ ಅರುಣ್‌ರವರ ನೇತೃತ್ವದಲ್ಲಿ ಮಾನಸಿಕ ಅಸ್ವಸ್ಥತೆ ಕುರಿತ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಯಿತು. ಈ ಕಾರ್ಯಕ್ರಮದಲ್ಲಿ ಚರ್ಚಿಸಲಾದ ಪ್ರಮುಖ ವಿಷಯಗಳ ಮಾನಸಿಕ ಅಸ್ವಸ್ಥತೆಯು ಮೆದುಳಿನ ಕಾಯಿಲೆ ಎಂದು ವಿವರಿಸಲಾಯಿತು. ಇಂಥವರು ತಮ್ಮ ಪರಿಸರಕ್ಕೆ ಹೊಂದಿಕೊಳ್ಳಲು ಕಷ್ಟಪಡುತ್ತಾರೆ. ಮಾನಸಿಕ ಅಸ್ವಸ್ಥರನ್ನು ಗುರುತಿಸುವುದು. ಇವರು ಸ್ವತ ತಮ್ಮೊಂದಿಗೆ ಮಾತನಾಡುವುದು. ಇತರರೊಂದಿಗೆ ಬೆರೆಯಲು ಇಚ್ಛಿಸದಿರುವುದು. ಅಸಹಜವಾಗಿ ಬೈಯುವುದು. ಅವರ ಲಕ್ಷಣಗಳು ಅನಿಯಮಿತ ಮಾತು, ಸಾಮಾನ್ಯವಾಗಿ ಬೇರೆಯವರ ಜೊತೆ ಹೊಂದಾಣಿಕೆಯಾಗದಿರುವ ವರ್ತನೆ ಎಂದು ತಿಳಿಸಿದರು. ಈ ರೀತಿಯ ಲಕ್ಷಣಗಳು ಕಂಡುಬಂದರೆ ತಕ್ಷಣವೇ ವೈದ್ಯಕೀಯ ಚಿಕಿತ್ಸೆಗೆ ಕರೆತರಬೇಕು. ಪ್ರಾಥಮಿಕ ಹಂತದಲ್ಲಿಯೇ ಚಿಕಿತ್ಸೆ ಪಡೆದುಕೊಳ್ಳುವುದರಿಂದ ಉತ್ತಮ ಫಲಿತಾಂಶ ದೊರೆಯಬಹುದು ಎಂದು ತಿಳಿಸಿದರು. ಈ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಮಾನಸಿಕ ಆರೋಗ್ಯದ ಮಹತ್ವವನ್ನು ಅರಿವಿಗೆ ತಂದುಕೊಟ್ಟಿತು. ಮೂಲಭೂತ ಮಾನಸಿಕ ಆರೋಗ್ಯ ಜ್ಞಾನವು ಯುವ ಜನತೆಗೆ ಉತ್ತಮ ಜೀವನದ ಮಾರ್ಗದರ್ಶನ ನೀಡುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.



ದಿನಾಂಕ 28–11–2024 ರಂದು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಅಷ್ಟೂರು ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆಯ ಬೀದರ್ ತಾಲೂಕಿನ ಕಾರ್ಯಕರ್ತರಾದ ಅರುಣ್‌ರವರು ಮಾನಸಿಕ ಅಸ್ವಸ್ಥತೆಯ ಬಗ್ಗೆ ಅರಿವು ಮೂಡಿಸಲಾಯಿತು. ಮಾನಸಿಕ ಅಸ್ವಸ್ಥತೆಯು ಪ್ರಸ್ತುತ ಸಮಾಜದಲ್ಲಿ ಹರಡುತ್ತಿರುವ ರೀತಿಯನ್ನು ಅವರನ್ನು ಸಮಾಜ ಕಾಣುತ್ತಿರುವ ರೀತಿಯನ್ನು ಮಕ್ಕಳಿಗೆ ಮನಮುಟ್ಟುವಂತೆ ತಿಳಿಸಲಾಯಿತು. ಮಾನಸಿಕ ಅಸ್ವಸ್ಥರನ್ನು ಸಮಾಜವು ಹುಚ್ಚ ಎಂದು ನಾಮಕರಣ ಮಾಡುವುದು ಆದರೆ ಇಂದಿನ ಪೀಳಿಗೆ ಅದನ್ನು ಬದಲಾಯಿಸಿ ಅವರನ್ನು ಗೌರವಿಸಿ ಅಂಥವರನ್ನು ದ್ವೇಷಿಸದೆ ಪ್ರೀತಿಯಿಂದ ಕಾಣುವಂತೆ ತಿಳಿಸಲಾಯಿತು. ಇಂಥವರು ಕಂಡುಬಂದಲ್ಲಿ ಚಿಲ್ಲರಿಗಿಯಲ್ಲಿ ಮೂರನೇ ಬುಧವಾರ ಡಿ.ಎಂ.ಎಚ್.ಪಿ ಕ್ಯಾಂಪ್ ಇರುತ್ತದೆ, ಪತ್ತೆ ಹಚ್ಚಿದ ಮಾನಸಿಕ ಅಸ್ವಸ್ಥರನ್ನು ಚಿಕಿತ್ಸೆಗೆ ತೋರಿಸಬೇಕೆಂದು ಅರಿವು ಮೂಡಿಸಲಾಯಿತು. ಈ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಿಸ್ಟಿಕ್ ಲೆಪ್ರಸಿ ಸುಪರ್ವೈಸರ್ ಮತ್ತು ಸಿ.ಎಚ್.ಓ ಜೋಸೆಫ್ ಅವರು ಮತ್ತು ಮುಖ್ಯ ಗುರುಗಳು ಸೇರಿ 80 ಮಕ್ಕಳು 6 ಗುರುಗಳು ಸೇರಿ ಒಟ್ಟು 88 ಜನ ಭಾಗವಹಿಸಿದ್ದರು.



ದಿನಾಕ 14/11/2024 ರಂದು ಆರ್ಬಿಟ್ ಸಂಸ್ಥೆಯ ಬೀದರ್ ತಾಲೂಕಿನ ಕಾರ್ಯಕರ್ತರಾದ ಅರುಣ್ ರವರಿಂದ ಶಾಹಪುರ್ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮಾನಸಿಕ ಅಸ್ವಸ್ಥತೆಯ ಬಗ್ಗೆ ಅರಿವು ಮಾಡಿಸಲಾಯಿತು. ಅದರಲ್ಲಿ ಶ್ರೀ ಅರುಣ್ ರವರು ಎಲ್ಲ ಮಾನವರಿಗೂ ಒಂದು ಒಳ್ಳೆಯ ಜೀವನವನ್ನು ಜೀವಿಸುವ ಹಕ್ಕು ಇದೆ ಅದನ್ನು ನಾವು ಯಾರಿಗೂ ಹುಚ್ಚರೆಂದು ಹಣೆಪಟ್ಟಿ ಕಟ್ಟಿ ಆ ಹಕ್ಕನ್ನು ಕಸಿದುಕೊಳ್ಳಬಾರದು. ಬದಲಾಗಿ ಅವರು ಜೀವಿಸುವ ಮಾರ್ಗವನ್ನು ಕಲ್ಪಿಸಬೇಕೆಂದು ಮಾನಸಿಕ ಅಸ್ವಸ್ಥತೆಯ ಲಕ್ಷಣಗಳೊಂದಿಗೆ ಮಕ್ಕಳು ಈ ಕಾಯಿಲೆಗೆ ತುತ್ತಾಗುವ ಸಾಧ್ಯತೆಗಳ ಬಗ್ಗೆ ತಿಳಿಸಿದರು. ವಿದ್ಯಾರ್ಥಿಗಳಾಗಿ ಅವರ ಮಾನಸಿಕ ಆರೋಗ್ಯವನ್ನು ಹೇಗೆ ಕಾಪಾಡಿಕೊಳ್ಳಬೇಕು ಹಾಗೂ ಮನೆಯವರಲ್ಲಿ ಈ ಲಕ್ಷಣಗಳು ಕಂಡುಬಂದರೆ ಸರ್ಕಾರಿ ಆಸ್ಪತ್ರೆಯಲ್ಲಿ 3ನೇ ಬುದುವಾರ ಚಿಲ್ಲರ್ಗಿ ಆಸ್ಪತ್ರೆಯಲ್ಲಿ ದೊರೆಯುವ ಉಚಿತ ತಪಾಸಣೆ ಹಾಗೂ ಚಿಕಿತ್ಸೆಯನ್ನು ಪಡೆದುಕೊಳ್ಳುವುದರ ಬಗ್ಗೆ ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಶಾಲೆಯ ಮುಖ್ಯಸ್ಥರು ಚನ್ನಬಸಪ್ಪ ಪಾಟೀಲ್ ಅವರು ಸೇರಿ 5 ಶಿಕ್ಷಕರು ಮತ್ತು 55 ಮಕ್ಕಳು ಸೇರಿನಒಟು 60 ಜನ ಭಾಗವಹಿಸಿದರು. ವರದಿಗಾರರು: ಅರುಣ್

## "ವಿಠಲ್ ರುಕ್ಮಿಣಿ ಎಂಬ ಹೆಸರಿನ ವಿಕಲಚೇತನರ ಸಂಘ"



ದಿನಾಂಕ: 26-11-2024 ರಂದು ಗಾದಗಿ ಗ್ರಾಮದಲ್ಲಿ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಕಾರ್ಯಕ್ರಮದ ಕಾರ್ಯಕರ್ತರು ವಿಠಲ್ ರುಕ್ಮಿಣಿ ಎಂಬ ಹೆಸರಿನ DPO ಸಂಘವನ್ನು ರಚಿಸಿದರು. ಗುಂಪುನಲ್ಲಿ ವಿಕಲಚೇತನ, ಬುದ್ಧಿಮಾಂದ್ಯತೆ, ಮಾನಸಿಕ ಅಸ್ವಸ್ಥತೆ ಹೊಂದಿರುವ ಆರು ಜನ ಫಲಾನುಭವಿಗಳು ಭಾಗವಹಿಸಿದರು. ಗುಂಪು ರಚನೆಯ ಉದ್ದೇಶಗಳ ಬಗ್ಗೆ ತಿಳಿಸಿದರು. ಗುಂಪಿನಲ್ಲಿ ಏನೇ ಸಮಸ್ಯೆಗಳು ಇದ್ದರೂ, ಯಾವುದೇ ಸರ್ಕಾರದ ಸೌಲಭ್ಯಗಳನ್ನು ಪಡೆಯಬೇಕಾದರೆ ನೀವು ಎದುರಿಸುವ ಎಲ್ಲ ಸಮಸ್ಯೆಗಳನ್ನು ಪಟ್ಟಿ ಮಾಡಿ ನಮಗೆ ಬರೆದು ಕೊಡಿ, ಅದನ್ನು ನಾವು ಪರಿಶೀಲಿಸಿ, ಮುಂದಿನ ದಿನಗಳಲ್ಲಿ ನಿಮ್ಮ ಸಮಸ್ಯೆಗೆ ಪರಿಹಾರ ನೀಡಲು ನಾವು ಮುಂಚಿತವಾಗಿ ನಿಮ್ಮನ್ನು ಸಹಾಯ ಮಾಡುತ್ತೇವೆ. ಯಾವುದೇ ಸಮಸ್ಯೆಗೆ ಪರಿಹಾರ ಸಿಗದಿದ್ದರೆ, ನಾವು ಎಲ್ಲರೂ ಒಟ್ಟಾಗಿ ಆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ಪ್ರಯತ್ನ ಪಡೋಣ ಎಂದು ಶ್ರೀ ಅರುಣ್‌ರವರು ಧೈರ್ಯ ತುಂಬಿದರು. ವರದಿಗಾರರು: ಅರುಣ್

## "ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ"



ದಿನಾಂಕ: 11-11-2024ರಂದು ಬಸವಕಲ್ಯಾಣ ತಾಲೂಕು ಉಮಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಮಾನಸಿಕ ಅಸ್ವಸ್ಥರ ಜಾಗೃತಿ ಕಾರ್ಯಕ್ರಮ ಮಾಡಲಾಯಿತು. ಸಂಪನ್ಮೂಲ ವ್ಯಕ್ತಿ ಶ್ರೀ ಆಕಾಶ್ ರವರು ವಿದ್ಯಾರ್ಥಿಗಳಿಗೆ ಮಾತನಾಡಿ, ಮನಸ್ಸು ಮತ್ತು ಶರೀರದ ಆರೋಗ್ಯದ ಮಹತ್ವವನ್ನು ವಿವರಿಸಿದರು. ದೈಹಿಕವಾಗಿ, ಮಾನಸಿಕವಾಗಿ, ಶರೀರಕವಾಗಿ, ಸಾಮಾಜಿಕವಾಗಿ ಸಮತೋಲನವಾಗಿರುವುದು ಪರಿಪೂರ್ಣ ಆರೋಗ್ಯ ಎಂದು ಹೇಳಿದರು. ಮಾನಸಿಕ ಅಸ್ವಸ್ಥತೆ ಮೆದುಳಿನ ಕಾಯಿಲೆ ಎಂದು ವಿವರಿಸಿದರು. ಮೆದುಳಿನ ರಾಸಾಯನಿಕ ಕ್ರಿಯೆಗಳಲ್ಲಿ ಏರುಪೇರಿನಿಂದ ಮಾನಸಿಕ ಅಸ್ವಸ್ಥತೆ ಉಂಟಾಗುತ್ತದೆ. ಇದು ವ್ಯಕ್ತಿಯ ವರ್ತನೆಗೆ ಮತ್ತು ದಿನನಿತ್ಯದ ಚಟುವಟಿಕೆಗಳಿಗೆ ತೊಂದರೆಯಾಗಿ ಕಾಣಿಸಿಕೊಳ್ಳುತ್ತದೆ ಎಂದು ಹೇಳಿದರು. ಮಾನಸಿಕ ಅಸ್ವಸ್ಥತೆ ಲಕ್ಷಣಗಳು ಭಯ. ಆತಂಕ, ಖಿನ್ನತೆ ಇಂತಹ ಲಕ್ಷಣಗಳು ಕಂಡುಬಂದರೆ, ಮನೋವೈದ್ಯರ ಸಲಹೆ ಮತ್ತು ಚಿಕಿತ್ಸೆಯಿಂದ ಗುಣಪಡಿಸಬಹುದು. ಸಮುದಾಯದಲ್ಲಿ ಕಂಡುಬಂದರೆ ಅವರನ್ನು ನಿರ್ಲಕ್ಷಿಸದೆ ಸಹಾಯ ಮಾಡಲು ಮುಂದಾಗಬೇಕಾಗಿದೆ ಎಂದು ತಿಳಿಸಿದರು. ಈ ಜಾಗೃತಿ ಕಾರ್ಯಕ್ರಮದಲ್ಲಿ 04 ಶಿಕ್ಷಕಿಯರು ಮತ್ತು ಒಟ್ಟು 24 ವಿದ್ಯಾರ್ಥಿಗಳು ಭಾಗವಹಿಸಿದರು. ವರದಿಗಾರರು: ಆಕಾಶ್

## "ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮ"



ನವೆಂಬರ್ 15 ರಂದು ಬಸವಕಲ್ಯಾಣ ತಾಲೂಕಿನ ರಾಜೇಶ್ವರ್ ಗ್ರಾಮದ ಸತ್ಯಶ್ರೀ ಪದವಿ ಪೂರ್ವ ಕಾಲೇಜ್ ವಿದ್ಯಾರ್ಥಿಗಳಿಗೆ, ಮಾನಸಿಕ ಆರೋಗ್ಯ ಕುರಿತು ಜಾಗೃತಿ ಕಾರ್ಯಕ್ರಮವನ್ನು, ಆರ್ಬಿಟ್ ಸಂಸ್ಥೆಯ ನವಜೀವನ ಎಲ್.ಎಲ್.ಎಲ್.ಎಫ್ ಕಾರ್ಯಕ್ರಮದ ಸಂಯುಕ್ತಾ ಆಶ್ರಯದಲ್ಲಿ ನಡೆಸಲಾಯಿತು. ಈ ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ವಿಜಯಕುಮಾರ್ ಅವರು ಮಾತನಾಡಿ ಮಾನಸಿಕ ಆರೋಗ್ಯ ಒಂದು ಮೆದುಳಿನ ಕಾಯಿಲೆ, ಅದರ ಲಕ್ಷಣಗಳು ಮತ್ತು ಕಾರಣಗಳು ವಿವರಿಸಿ ಈ ಕಾಯಿಲೆಗೆ ಒಳಗಾದ ವ್ಯಕ್ತಿಗಳನ್ನು ಪ್ರಾಥಮಿಕವಾಗಿ ಗುರುತಿಸಿ, ಅವರನ್ನು ಜಿಲ್ಲಾ ಮಾನಸಿಕ ಆರೋಗ್ಯ ಕಾರ್ಯಕ್ರಮದ ಶಿಬಿರದಲ್ಲಿ ಮನೋವೈದ್ಯರಿಂದ ಉಚಿತವಾದ ತಪಾಸಣೆ ಹಾಗೂ ಚಿಕಿತ್ಸೆಯ ಮೂಲಕ ಸ್ಪಂದಿಸಲಾಗುವುದು ಹಾಗೂ ಒಂದು ವರ್ಷದಿಂದ ಸತತವಾಗಿ ಮಾತ್ರೆಗಳು ಸೇವಿಸುವುದರಿಂದ ಅನೇಕರು ಗುಣಮುಖರಾಗಿ ಕೆಲಸ ಕಾರ್ಯ ಗಳಲ್ಲಿ ತೊಡಗಿಸಿಕೊಂಡಿರುವರು ಇಂತಹ ವ್ಯಕ್ತಿಗಳು ಕಂಡುಬಂದಲ್ಲಿ ನಮ್ಮ ಸಂಸ್ಥೆಯ ಕರೆ ಮಾಡಿ ಮಾಹಿತಿ ನೀಡಬಹುದು ಎಂದು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕಾಲೇಜ್ ಉಪನ್ಯಾಸಕರು ಹಾಗೂ ಸಹಾಯವಾಣಿ ಸಂಖ್ಯಾ 903666427 ವಿದ್ಯಾರ್ಥಿಗಳು ಸೇರಿ ಒಟ್ಟು 68 ಜನರು ಭಾಗವಹಿಸಿದರು. ವರದಿಗಾರರು: ವಿಜಯಕುಮಾರ್

## "ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆ"



ದಿನಾಂಕ 28-11-2024 ರಂದು ಔರಾದ್ ತಾಲೂಕಿನ ಶೆಂಬೆಳ್ಳಿ ಗ್ರಾಮದಲ್ಲಿ ಆರ್ಬಿಟ್ ಸಂಸ್ಥೆ ಹಾಗೂ ನವಜೀವನ ಲಿವ್.ಲವ್.ಲಾಫ್ ಫೌಂಡೇಶನ್ ಇವರ ಸಂಯುಕ್ತ ಆಶ್ರಯದಲ್ಲಿ ಸಂಸ್ಥೆಯ ಕಾರ್ಯಕರ್ತರಾದ ಶ್ರೀ ಯೊಹಾನ್ ರವರು ಮಾನಸಿಕ ಅಸ್ವಸ್ಥರ ಆರೈಕೆದಾರರ ಸಭೆಯನ್ನು ನಡೆಸಿಕೊಡಲಾಯಿತು. ಈ ಸಂಘಕ್ಕೆ ಸುಭಾಷ್ ಚಂದ್ರ ಬೋಸ ಎಂಬ ನಾಮವನ್ನಿತ್ತು, ಸಂಘದಲ್ಲಿ ಪಾಲ್ಗೊಂಡ ಆರೈಕೆದಾರರಿಗೆ ಸಂಘದ ಸಭೆಯ ಉದ್ದೇಶವನು ತಿಳಿಸಿದರು. ಈ ಮಾನಸಿಕ ಅಸ್ವಸ್ಥರನ್ನು ಹೇಗೆ ಆರೈಕೆ ಮಾಡಬೇಕು? ಮಾನಸಿಕ ಅಸ್ವಸ್ಥರಿಗೆ ಸಮಾಜದಲ್ಲಿ ಎಲ್ಲಾ ರೀತಿಯ ಹಕ್ಕು, ಗೌರವ, ಸ್ಥಾನ, ಸಿಗುವತ್ತಾಗಬೇಕು. ಪ್ರತಿದಿನ ತಪ್ಪದೆ ಮಾತ್ರೆಗಳನ್ನು ನೀಡಬೇಕು. ದಿನನಿತ್ಯದ ಚಟುವಟಿಕೆಗಳನ್ನು ಹೇಗೆ ಹೇಳಿಕೊಡಬೇಕು. ಸಭೆ ಸಮಾರಂಭಗಳಲ್ಲಿ ಭಾಗವಹಿಸಲು ಅನುವು ಮಾಡಿಕೊಡಬೇಕು. ಸಾಮಾಜಿಕ ಭದ್ರತಾ ಯೋಜನಗಳಾದ UDID ಕಾರ್ಡ್, ನಿರಾಮಯ ಆರೋಗ್ಯ ವಿಮೆ, ಆರೋಗ್ಯ ಕಾರ್ಡ್, ವೇತನ ಹೀಗೆ ಮುಂತಾದ ಯೋಜನೆಗಳ ಸದುಪಯೋಗವನು ಪಡೆದುಕೊಳ್ಳಬೇಕು ಎಂದು ತಿಳಿಸಿದರು. ಈ ಸಂಘದಲ್ಲಿ 06 ಆರೈಕೆದಾರರು ಭಾಗವಹಿಸಿದ್ದರು. ವರದಿಗಾರರು: ಯೊಹಾನ್

# ಸೇವಾ ಸಂಗಮ ಸಂಸ್ಥೆ, ಕಲಬುರಗಿ

## "ಮಕ್ಕಳ ಬೆಳವಣಿಗೆಯ ಕುರಿತು ಜಾಗೃತಿ"



ಕಲಬುರಗಿ: ತಾಲ್ಲೂಕಿನಲ್ಲಿ ಬರುವ ಇಟ್ಗಾ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿ.26.11.2024 ರಂದು ಸೇವಾ ಸಂಗಮ ಸಂಸ್ಥೆ, ಅಜೀಂ ಪ್ರೇಮಜಿ ಫೌಂಡೇಶನ, ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಕಾರ್ಯಕ್ರಮದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಶ್ರೀ ರಾಜಕುಮಾರ ಮಾತನಾಡಿ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳನ್ನು ಗುರುತಿಸುವ ವಿಧಾನಗಳ ಕುರಿತು ಮತ್ತು ಯಾವ ಹಂತಗಳಲ್ಲಿ ಮಕ್ಕಳು ಬೆಳವಣಿಗೆಯಲ್ಲಿ ಕುಂಠಿತಗೊಳ್ಳುವ ಸಾಧ್ಯತೆಗಳಿವೆ ದೈಹಿಕ, ಮಾನಸಿಕ, ಭೌತಿಕ, ಸಾಮಾಜಿಕ, ಭಾಷ ಬೆಳವಣಿಗೆಯಲ್ಲಿ ಎಂಬುವುದರ ಕುರಿತು ಮತ್ತು ಅಂತಹ ಮಕ್ಕಳಿಗೆ ಉತ್ತೇಜಕ ಚಟುವಟಿಕೆಯನ್ನು ನೀಡುವ ಮೂಲಕ ಅವರಲ್ಲಿರುವ ಬೆಳವಣಿಗೆ ಕುಂಠಿತವನ್ನು ಕಡಿತಗೊಳಿಸುವ ಕಾರ್ಯವನ್ನು ಮಾಡಬಹುದಾಗಿದೆ. ಆದ್ದರಿಂದ ಮಗುವನ್ನ ಅತ್ಯಂತ ಚಿಕ್ಕ ವಯಸ್ಸಿನಲ್ಲಿಯೆ ಶೀಘ್ರವಾಗಿ ಗುರುತಿಸಬೇಕಾಗುತ್ತದೆ ಎಂದು ಹೇಳಿದರು. ಕಾರ್ಯಕ್ರಮದ ವೇದಿಕೆಯಲ್ಲಿ ಶಾಲಾ ಮುಖ್ಯಗುರುಗಳು, ಶಾಲಾ ಶಿಕ್ಷಕ ವೃಂದದವರು ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ 80 ಜನ ಶಾಲಾ ಮಕ್ಕಳು ಭಾಗವಹಿಸಿದರು.

## "ಸಂವಿಧಾನ ದಿನಾಚರಣೆ"



ಕಲಬುರಗಿ ತಾಲ್ಲೂಕಿನಲ್ಲಿ ಬರುವ ಇಟ್ಗಾಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿ.26.11.2024 ರಂದು ಸೇವಾ ಸಂಗಮ ಸಂಸ್ಥೆ, ಅಜೀಂ ಪ್ರೇಮಜಿ ಫೌಂಡೇಶನ, ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ "ಸಂವಿಧಾನ ದಿನಾಚರಣೆ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದಲ್ಲಿ ಸಂವಿಧಾನದ ದಿನಾಚರಣೆಯ ಹಿನ್ನಲೆ ಕುರಿತು, ಸಂವಿಧಾನದ ಮಹತ್ವ ಮತ್ತು ಮುನ್ನೋಟವನ್ನು ವಿವರಿಸಲಾಯಿತು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶ್ರೀ ಬಸವರಾಜ ಸಹ ಶಿಕ್ಷಕರು ಇವರು ಸಂವಿಧಾನವನ್ನು ರಚಿಸಲು ಅನೇಕ ಗಣ್ಯರು ಮತ್ತು ಮಹನೀಯರು ತಮ್ಮ ಅಮೂಲ್ಯ ಜ್ಞಾನವನ್ನು ನೀಡಿದ್ದು, ಈ ಸಮತಿಯಲ್ಲಿ ಮುಖ್ಯವಾಗಿ ಕರುಡು ಸಮಿತಿಯ ಅಧ್ಯಕ್ಷರಾಗಿದ್ದ ಭಾರತರತ್ನ ಸಂವಿಧಾನ ಶಿಲ್ಪಿ ಡಾ.ಬಿ.ಆರ್ ಅಂಬೇಡ್ಕರ್ ಅವರ ಪಾತ್ರ ಅತಿ ಮುಹತ್ವವಾಗಿದೆ ಎಂದರು. ಅವರು ಅನೇಕ ದೇಶಗಳ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಅಧ್ಯಯನ ಮಾಡಿ. ಭಾರತಕ್ಕೆ ಹೊಂದುವ ಅಂಶಗಳನ್ನು ಸಂಗ್ರಹಿಸಿ, ನಮ್ಮ ದೇಶಕ್ಕೆ ಅನನ್ಯವಾದ ಸಂವಿಧಾನವನ್ನು ರಚಿಸಿದರು. ಡಾ.ಬಿ.ಆರ್ ಅಂಬೇಡ್ಕರ ಅವರು ಭಾರತ ಸಂವಿಧಾನದ ನಿರ್ಮಾಣದಲ್ಲಿ ಮಹತ್ವದ ಪಾತ್ರ ವಹಿಸಿರುವುದರಿಂದ ಅವರನ್ನು "ಸಂವಿಧಾನ ಶಿಲ್ಪಿ" ಎಂದು ಕರೆಯುತ್ತಾರೆ ಎಂದು ಶ್ರೀ ಬಸವರಾಜ ಹೇಳಿದರು.

## "ಬಾಲ್ಯ ವಿವಾಹದ ನಿಷೇದ ಕುರಿತು ಅರಿವು ಕಾರ್ಯಕ್ರಮ"



ನವೆಂಬರ ತಿಂಗಳ 25 ರಂದು ಕಲಬುರಗಿ ನಗರ ಪ್ರದೇಶದಲ್ಲಿ ಬರುವಂತಹ ಮಿಲತ್ ನಗರ ಅಂಗನವಾಡಿ ಕೇಂದ್ರ 1 ರಲ್ಲಿ ಸೇವಾ ಸಂಗಮ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ, ಕಲಬುರಗಿ ಇವರ ಸಂಯುಕ್ತ ಆಶ್ರಯದಲ್ಲಿ ಬಾಲ್ಯ ವಿವಾಹದ ನಿಷೇದ ಕುರಿತು ಅರಿವು ಕಾರ್ಯಕ್ರಮ ಹಮ್ಮಿಕೋಳಲಾಗಿತ್ತು. ಈ ಕಾರ್ಯಕ್ರಮದಲ್ಲಿ ಅಂಗನವಾಡಿಕ ಾರ್ಯಕರ್ತೆ ಶ್ರೀಮತಿ ಶಶಿಕಲಾ, ಅಂಗನವಾಡಿ ಸಹಾಯಕಿ ಹಾಗೂ ಒಟ್ಟು 14 ಜನ ಮಹಿಳೆಯರು ಪಾಲ್ಗೊಂಡಿದ್ದರು. ಈ ಕಾರ್ಯಕ್ರಮದಲ್ಲಿ ಹೆಣ್ಣು ಮಕ್ಕಳಿಗೆ 21 ವರ್ಷ ಹಾಗೂ ಗಂಡು ಮಕ್ಕಳಿಗೆ 25 ವರ್ಷದ ಒಳಗಿರುವಂತವರಿಗೆ ಮದುವೆ ಮಾಡುವಂತಿಲ್ಲ ಎಂಬುದಾಗಿ ತಿಳಿಸಲಾಯಿತು. ಹಿಗೆ ಮಾಡಿದರೆ ಅದು ಕಾನೂನು ಪ್ರಕಾರ ಅಪರಾಧವಾಗುತ್ತದೆ. ಒಂದು ವೇಳೆ ಮದುವೆ ಮಾಡಿದರೆ ಕಾನೂನು ಪ್ರಕಾರ ಜೈಲಿಗೆ ಹೂಗಬೇಕಾಗುವುದು. ಹೆಣ್ಣು ಮಕ್ಕಳು ದೈಹಿಕ ಮತ್ತು ಮಾನಸಿಕವಾಗಿ ಸದೃಡವಾಗಲು ಸಾಧ್ಯವಾಗುವುದಿಲ್ಲ. ಇದರ ಜೊತೆಗೆ, ಬೆಳವಣಿಗೆಯಲ್ಲಿ ಕುಂಟಿತ ವಿರುವ ಮಕ್ಕಳ ಜನನ ಸಾಧ್ಯತೆಯೂ ಉದೆ ಎಂದು ವಿವರಿಸಲಾಯಿತು.

## "ಮಕ್ಕಳ ಅಳತೆಯ ಮಾಪನ"



16 ನವೆಂಬರ್ 2024 ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜಿ ಫೌಂಡೇಶನ್ ಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯ ಅಡಿಯಲ್ಲಿ ಕಲಬುರಗಿ ತಾಲೂಕಿನ ಕಡಣಿ ಗ್ರಾಮದಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಹೊಂದಿರುವ ಮಕ್ಕಳ ಬೇಬಿ ಸ್ಕ್ರಿನಿಂಗ್ ಮಾಡಲಾಯಿತು. ಮಕ್ಕಳ ತೂಕ, ಎತ್ತರ, ಎದೆಯ ಸುತ್ತಳತೆ, ತಲೆಯ ಸುತ್ತೆಳತೆ ಚೆಕ್ ಮಾಡಿ ಬೆಳಚಣಿಗೆ ಕುಂಠಿತ ಮಕ್ಕಳನ್ನು ಗುರುತಿಸುವಿಕೆಯಲ್ಲಿ ಈ ಬೇಬಿ ಸ್ಕೀನಿಂಗ್ ತುಂಬಾ ಅವಶ್ಯವಾದ್ದು ಎಂದು ಲಕ್ಷ್ಮೀ ಅವರು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಇದರಲ್ಲಿ 12 ಜನ ಮಕ್ಕಳು ಭಾಗವಹಿಸಿದರು.

## “ಬೆಳವಣಿಗೆಯಲ್ಲಿ ಕುಂಠಿತ ಆರೈಕೆದಾರರ ದಿನಾಚರಣೆ”



ನವೆಂಬರ ತಿಂಗಳ 14 ರಂದು ಕಲಬುರಗಿ ನಗರ ಚೇತನ ಕೇಂದ್ರದಲ್ಲಿ ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ಕಲಬುರಗಿ ಇವರ ಸಂಯುಕ್ತಾ ಆಶ್ರಯದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಹಾಗೂ ಆರಂಭಿಕ ಶಿಕ್ಷಣ ಯೋಜನೆ ಅಡಿಯಲ್ಲಿ “ಆರೈಕೆದಾರರ ದಿನಾಚರಣೆ” ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಮುಖ್ಯ ಅಥಿತಿಯಾಗಿ ಶ್ರೀಮತಿ ಗಾಯತ್ರಿ, ಶ್ರೀಮತಿ ಕಲ್ಪನಾ, ಬೆಳವಣಿಗೆಯಲ್ಲಿ ಕುಂಠಿತ ವಿರುವ 22 ಮಕ್ಕಳು ಹಾಗೂ ಪಾಲಕರು ಪಾಲ್ಗೊಂಡಿದರು. ಪಾಲಕತನ್ನು ಉದ್ದೇಶಿಸಿ ಮಾತನಾಡಿದ ಬ್ರದರ್ ಅವರು “ನಾವೆಲ್ಲಾ ಪಾಲಕರು ಒಗಟ್ಟಾಗಿ ಇದ್ದರೆ ಸರಕಾರದ ಸೌಲಭ್ಯಗಳನ್ನು ನಮ್ಮ ಮಕ್ಕಳಿಗೆ ಪಡೆದುಕೊಳ್ಳಲು ಅನುಕೂಲವಾಗುತ್ತದೆ” ಎಂದು ಅಭಿಪ್ರಾಯ ಪಟ್ಟರು. ನಗರ ಪ್ರದೇಶದ ಪುರಸಭೆಗಳಲ್ಲಿ, ಪಂಚಾಯತಿಗಳಲ್ಲಿ ಶೇಕಡಾ 5% ರಷ್ಟು ಅನುದಾನ ಮತ್ತು ಫೀಜಿಥೇರೆಪಿ ಸಿಗುವ ಅನುದಾನಗಳನ್ನು ನಾವೆಲ್ಲಾ ಒಗ್ಗಟ್ಟಾಗಿ ಪಡೆದುಕೊಳ್ಳಬಹುದು ಎಂದು ತಿಳಿಸಿದರು. ಜೊತೆಗೆ ಶೀಘ್ರ ಪತ್ತೆ ಹಚ್ಚುವಿಕೆ ಹಾಗೂ ಆರಂಭಿಕ ಶಿಕ್ಷಣ ವ್ಯವಸ್ಥಾಪಕರಾದ ಶ್ರೀಮತಿ ಶ್ವೇತಾ ಹಾಗೂ 4 ಜನ ಕಾರ್ಯಕರ್ತರು ಪಾಲ್ಗೊಂಡಿದರು.

## “ಬೆಳವಣಿಗೆ ಕುಂಠಿತ ಮಕ್ಕಳ ಕಾರ್ಯಕ್ರಮ”

ನವೆಂಬರ್ 13ರಂದು ಸೇವಾ ಸಂಗಮ ಸಂಸ್ಥೆ ಮತ್ತು ಅಜೀಮ್ ಪ್ರೇಮಜಿ ಫೌಂಡೇಶನ್ ಸಂಯೋಗದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಕುರಿತು ಜಾಗೃತಿ ಕಾರ್ಯಕ್ರಮವನ್ನು ಕಲಬುರಗಿ ತಾಲೂಕಿನ ಯಳವಂತಿಗೆ ಗ್ರಾಮದ ಸಿದ್ದಾರೂಢ ಮಠದಲ್ಲಿ ಹಮ್ಮಿಕೊಳ್ಳಲಾಯಿತು. ಬೆಳೆವಣಿಗೆಯಲ್ಲಿ ಕುಂಠಿತತೆಯನ್ನು ಹೊಂದಿರುವ ಮಕ್ಕಳನ್ನು ಹೇಗೆ ಸರಿಯಾಗಿ ಪತ್ತೆ ಹಚ್ಚುವುದು ಮತ್ತು ಶೀಘ್ರದಲ್ಲಿ ಅವರಿಗೆ ಯಾವರೀತಿಯ ಚಟುವಟಿಕೆಗಳನ್ನು ನೀಡಿವುದು ಎಂಬುದರ ಕುರಿತು, ನಮ್ಮ ಯೋಜನೆಯ ಮಹತ್ವವನ್ನು ವಿವರಿಸುವ ಕರಪತ್ರಗಳ ಮೂಲಕ ತಿಳಿಸಲಾಯಿತು. ಮಕ್ಕಳನ್ನು ಚೇತನ ಕೇಂದ್ರದಲ್ಲಿ ದಾಖಲಿಸಿ ಅವುಗಳ ಸದುಪಯೋಗವನ್ನು ಪಡೆಯಬೇಕೆಂದು ಲಕ್ಷ್ಮಿ ಅವರು ಶಿಫಾರಸ್ಸು ಮಾಡಿದರು. ಈ ಕಾರ್ಯಕ್ರಮದಲ್ಲಿ ಸುಮಾರು 500 ಜನ ಗ್ರಾಮಸ್ಥರು ಭಾಗವಹಿಸಿದರು. ಕಾರ್ಯಕ್ರಮದ ಜಾಗೃತಿಗೆ ಸಕಾರಾತ್ಮಕ ಪ್ರತಿಕ್ರಿಯೆ ನೀಡಿದರು.



ನವೆಂಬರ್ 16ರಂದು ಸೇವಾ ಸಂಗಮ ಸಂಸ್ಥೆ ಮತು ಅಜೀಮ್ ಪ್ರೇಮಜಿ ಫೌಂಡೇಶನ್ ಸಂಯೋಗದಲ್ಲಿ ಕಲಬುರಗಿ ನಗರ ಪ್ರದೇಶದಲ್ಲಿರುವ ವಿದ್ಯಾ ನಗರದಲ್ಲಿ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆಯ ಅಡಿಯಲ್ಲಿ 0–6 ವರ್ಷದೊಳಗಿನ ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳನ್ನು ಹೇಗೆ ಗುರುತಿಸಬೇಕು ಎಂದು ಕಾರ್ಯಾಕ್ರಮದಲ್ಲಿ ವಿವರಿಸಿದರು. ಗುರುತಿಸಿದ ಮಕ್ಕಳನ್ನು ಚಟುವಟಿಕೆ ಮಾಡುವ ಮುಖಾಂತರ ಅವರಲ್ಲಿರುವ ನ್ಯೂನತೆಯನ್ನು ಕಡಿಮೆ ಮಾಡುವುದು ಎಂದು ಶ್ರೀಮತಿ ಶಿವಕಾಂತ ಅವರು ತಿಳಿಸಿದರು. ಈ ಕಾರ್ಯಕ್ರಮದಲ್ಲಿ 05 ಜನ ಅಂಗನವಾಡಿ ಕಾರ್ಯಕರ್ತರು ಮಕ್ಕಳ ಪಾಲಕರು 11 ಜನ ಭಾಗವಹಿಸಿದರು.



## “ಸತತ ಪ್ರಯತ್ನವೇ ಯಶಸ್ವಿನ ಮೆಟ್ಟಿಲು”



ಕಲಬುರಗಿ: ಸೇವಾ ಸಂಗಮ ಸಂಸ್ಥೆಯ ಶೀಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣ ಯೋಜನೆಯ ಅಡಿಯಲ್ಲಿ ಸುಮಾರು 2 ವರ್ಷಗಳಿಂದ ಕಾರ್ಯಕರ್ತೆಯಾಗಿ ಸೇವೆಯನ್ನು ಸಲ್ಲಿಸುತಿದ್ದೇನೆ. ಈ ಯೋಜನೆಯ ಮುಖ್ಯ ಉದ್ದೇಶ ಬೆಳವಣಿಗೆಯಲ್ಲಿ ಕುಂಠಿತಗೊಂಡಿರುವ ಮಕ್ಕಳನ್ನು ಶಿಶುವಿನ ಅವಸ್ಥೆಯಲ್ಲಿಯೇ ಗುರುತಿಸುವ ಮೂಲಕ ಆ ಮಕ್ಕಳ ನ್ಯೂನತೆಗೆ ತಕ್ಕಂತೆ ಚಟುವಟಿಕೆಯನ್ನು ನೀಡುವ ಮೂಲಕ ಆ ನ್ಯೂನತೆಯಿಂದ ಮಗುವನ್ನು ಮುಕ್ತಗೊಳಿಸುವುದಾಗಿದೆ. ಕಲಬುರಗಿ ನಗರದಲ್ಲಿ ಬರುವತಾರ ಫೈಲ್ ಏರಿಯಾ ಮಕ್ಕಳ ಮನೆ ಬೇಟಿ ಮಾಡುವ ಮೂಲಕ ವಿವಿಧ ರೀತಿಯಾ ಚಟುವಟಿಕೆಯನ್ನು ಆ ಮಕ್ಕಳಿಗೆ ಮಾಡಿಸುವುದು ನನ್ನ ಪಾಲಿಗೆ ಒಂದು ಸವಾಲಾಗಿತು. ಕಾರಣ ನಾವು ಮಾಡಿಸುವ ಚಟುವಟಿಕೆಗೆ ಮಕ್ಕಳು ನಮ್ಮಗೆ ಪ್ರಾರಂಭದಲ್ಲಿ ಸ್ಪಂಧಿಸುತ್ತಿರಲಿಲ್ಲ, ಪಾಲಕರು ನನಗೆ ಸಹಕರಿಸುತ್ತಿರಲಿಲ್ಲ, ಇದ್ದರಿಂದ ಮಕ್ಕಳನ್ನು ಸಂಭಾಳಿಸುವುದು ಕಷ್ಟಕರವಾಗಿತ್ತು. ಜುಬೀ ಯಾಖಾನ್ ತಂದೆ ಇಮಾರನ್ ತಾಯಿ ನಸ್ರೀನ್ 4 ವರ್ಷ ಕಲಬುರಗಿ ನಗರ ತಾರಫೈಲ್ ಏರಿಯಾ ಈ ಮಗುವಿಗೆ ಕತ್ತು ನಿಂತಿರುವುದಿಲ್ಲ, ಕುಳಿತುಕೋಳ್ಳಲು ಬರುವುದಿಲ್ಲ, ಮಾತನಾಡಲು ಬರುವುದಿಲ್ಲ, ಪ್ರಾರಂಭದಲ್ಲಿ ಮಗುವಿನ ಮನೆ ಭೇಟಿ ಮಾಡಿದಾಗ ನಾನು ಕಂಡ ಮಗುವಿನ ಸಮಸ್ಯೆಯಾಗಿತ್ತು. ನಾನು ಮಗುವಿಗೆ ಪ್ರತಿ ವಾರಕ್ಕೊಮ್ಮೆ 2 ಸಲ ಮಗುವಿನ ಮನೆ ಭೇಟಿ ನೀಡಿ ಚಟುವಟಿಕೆ ಮಾಡಿಸಿ ಆ ಮಗುವಿನಲ್ಲಿ ಸ್ವಲ್ಪ ಮಟ್ಟಿಗೆ ಬದಲಾವಣೆಕಂಡು ಪಾಲಕರು ನನ್ನಕಡೆ ಸೆಳೆಯುವಂತೆ ಮಾಡಿದೆ ಇದ್ದರಿಂದ ಮಗುವಿಗೆ ವಿವಿಧ ಚಟುವಟಿಕೆಯನ್ನು ಮಾಡಿಸಲು ಪಾಲಕರು ಸಹಕರಿಸಲು ಪ್ರಾರಂಭಿಸಿದರು ಜೊತೆಗೆ ನಾನು ಕಲಿಸಿದ ಅಥವಾ ಮಾಡಿಸಿದ ಚಟುವಟಿಕೆಯನ್ನು ಮನೆಯಲ್ಲಿ ಮಗುವಿಗೆ ಮಾಡಿಸಲು ಪ್ರಾರಂಭಿಸಿದರು, ಇದರ ಪ್ರತಿಫಲವಾಗಿ ಪ್ರಸ್ತುತ ಮಗು ಸಹಾಯವಿಲ್ಲದೆ 10 ನಿಮಿಷಗಳ ಕಾಲ ಕುಳಿತುಕೋಳ್ಳುತ್ತದೆ. ಮನೆಯ ಸದಸ್ಯರನ್ನು ಗುರುತಿಸುತ್ತದೆ. ಈ ಯಶಸ್ಸು ಕಾಣುವುದಕ್ಕೆ ನನ್ನ ಮತ್ತು ಪಾಲಕರ ಸತತ ಪ್ರಯತ್ನವೆ ಕಾರಣವಾಗಿದೆ. ನಾನು ಹೇಳಲು ಬಯಸುವುದೆನೆಂದರೆ ಪ್ರಾರಂಭದಲ್ಲಿ ಯಾವ ಕಾರ್ಯವಾದರು ಕಷ್ಟಕರ ಯೆನಿಸಬಹುದು ಅದನ್ನು ಮೆಟ್ಟಿ ನಿಲ್ಲಬೇಕಾದರೆ ನಿವು “ಸತತ ಪ್ರಯತ್ನ ಇದ್ದಾಗಲೇ ಯಶಸ್ವಿ ಕಾಣಲು ಸಾಧ್ಯ ಎಂಬುವುದು ನನ್ನ ಅನಿಸಿಕೆಯಾಗಿದೆ.

## “ಬೆಳವಣಿಗೆಯಲ್ಲಿ ಕುಂಠಿತ ವಿರುವ ಮಕ್ಕಳ ಬಗ್ಗೆ ಜಾಗೃತಿ ಕಾರ್ಯಕ್ರಮ”



ನವೆಂಬರ್ 11ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜೀ ಫೌಂಡೇಶನ್ ಇವರ ಸಂಯೋಗದಲ್ಲಿ ಶಿಘ್ರ ಪತ್ತೆ ಹಚ್ಚುವಿಕೆ ಮತ್ತು ಆರಂಭಿಕ ಶಿಕ್ಷಣದ ಯೋಜನೆ ಕುರಿತು ಕಲಬುರಗಿ ತಾಲೂಕು ಜೈಲ್ ಕಾಲೋನಿಯ ಸರಕಾರಿ ಕಿರಿಯ ಪ್ರಾಥಮಿಕ ಶಾಲೆ ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು. 0–6 ವರ್ಷದೊಳಗಿನ ಮಕ್ಕಳ ಬೆಳವಣಿಗೆಯಲ್ಲಿ ಕುಂಠಿತವಾಗಿರುವ ಲಕ್ಷಣಗಲನ್ನು ಗುರುತಿಸುವ ವಿಷಯವಾಗಿ ಶ್ರೀಮತಿ ದ್ರಾಕ್ಷಾಯಣಿ ಅವರು ವಿಧ್ಯಾರ್ಥಿಗಳಿಗೆ ಮಾಹಿತಿ ನೀಡಿದರು. ಅವರ ಪ್ರಕಾರ. 03 ತಿಂಗಳೊಳಗೆ ಮಗು ತನ್ನತಲೆ ನಿಲ್ಲಿಸಬೇಕು. 06 ತಿಂಗಳೊಳಗೆ ಅಂಬೆಗಾಲು ಹಾಕಬೇಕು. 01 ವರ್ಷದ ಒಳಗೆ ಮಗು ನಡೆಯಲು ಆರಂಭಿಸಬೇಕು. 03 ವರ್ಷದೊಳಗೆ ಮಗು ಅಂಗನವಾಡಿಗೆ ಹೊಗಲು ತಯಾರಾಗಬೇಕು. 06 ವರ್ಷದಲ್ಲಿ ಮಗು ಸಾಮಾಜಿಕವಾಗಿ ಬೆರೆಯಬೇಕು. ಈ ಬೆಳೆವಣಿಗೆಯಲ್ಲಿ ಯಾವುದಾದರು ತಡವಾಗಿದಲ್ಲಿ. ಮಕ್ಕಳ ಬೆಳೆವಣಿಗೆಯಲ್ಲಿ ಕುಂಠಿತತೆ ಉಂಟಾಗುತ್ತದೆ. ಈ ಕಾರ್ಯಕ್ರಮದಲ್ಲಿ 12 ಜನರು ಭಾಗವಹಿಸಿದರು.

## “ಒಗ್ಗಟಿನಲ್ಲಿ ಬಲವಿದೆ”



ನವೆಂಬರ್ 21 2024 ರಂದು ಸೇವಾ ಸಂಗಮ ಸಂಸ್ಥೆ ಹಾಗೂ ಅಜೀಮ್ ಪ್ರೇಮಜಿ ಫೌಂಡೇಶನ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ದಿ ಇಲಾಖೆ ಇವರ ಸಂಯುಕ್ತ ಆಶ್ರಯದಲ್ಲಿ ಅಂಬಿಕಾ ನಗರ ಅಂಗನವಾಡಿ ಕೇಂದ್ರ 2 ರಲ್ಲಿ ಬೆಳವಣಿಗೆಯಲ್ಲಿ ಕುಂಠಿತ ಇರುವ ಮಕ್ಕಳ ಪಾಲಕರ ಸಭೆಯನ್ನು ಆಯೋಜಿಸಲಾಗಿತು. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡುತ್ತಾ ಶ್ರೀಮತಿ ಶ್ವೇತಾ ಯೋಜನಾ ವ್ಯವಸ್ಥಾಪಕರು ಇವರು ಪಾಲಕರಿಗೆ ಆರೈಕೆದಾರರ ದಿನಾಚರಣೆ ಪ್ರಯುಕ್ತ ಪಾಲಕರಿಗೆ ಅಭಿನಂದಿಸುತ್ತಾ ಪಾಲಕರ ಎಲ್ಲರೂ ಒಗ್ಗಟ್ಟಾಗಿದ್ದರೆ, ಸರ್ಕಾರದ ಸೌಲಭ್ಯಗಳಿಗೆ ವಂಚಿತರಾಗುತ್ತಿದ್ದೇವೆ ನಮ್ಮ ಸಮಸ್ಯೆಗಳಿಗೆ ನಾವೆ ಗುರುತಿಸಿ ಅದರ ಪರಿಹಾರವನ್ನು ಹುಡುಕಿ ಅದನ್ನು ನಾವೆಲ್ಲರೂ ಒಗ್ಗಟ್ಟಾಗಿ ಲಾಭವನ್ನು ಪಡೆದುಕೋಳ್ಳಬೇಕು. ಅದಕ್ಕಾಗಿ ಈ ಪಾಲಕರ ಸಭೆಯನ್ನು ನಡೆಸುವುದು ಅಮೂಲ್ಯವಾಗಿದೆ. ಪಾಲಕರು ಇದರ ಸದುಪಯೋಗವನ್ನು ಪಡೆದುಕೊಂಡರೆ ಮುಂದಿನ ದಿನಗಳಲ್ಲಿ ನಮಗೆ ನಾವೇ ಸದೃಡರಾಗಲು ಸಾಧ್ಯವಾಗುತ್ತದೆ. ಕು. ಅನಿತಾ ಅವರು ಹಾಗೂ ಪಾಲಕರು ಈ ಸಭೆಯಲ್ಲಿ 04 ಜನ ಪಾಲಕರು ಸಕ್ರಿಯವಾಗಿ ಪಾಲ್ಗೊಂಡರು.

# “ಉಜ್ಜೀವನ ಕಾರ್ಯಕ್ರಮ”

## “ಸೇವಾ ಸಂಗಮ ಅಭಿವೃದ್ದಿ ಸಂಸ್ಥೆಯ ವತಿಯಿಂದ ವಿವಿಧ ಕಾರ್ಯಕ್ರಮಗಳ ಮಾಹಿತಿ”



ಸೇವಾ ಸಂಗಮ ಅಭಿವೃದ್ಧಿ ಸಂಸ್ಥೆಯಿಂದ ದಿನಾಂಕ: 07–11–2024ರಂದು ಉಜ್ಜೀವನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಈ ಯೋಜನೆಯಡಿಯಲ್ಲಿ ಕಲಬುರಗಿ ತಾಲ್ಲೂಕಿನ ಸೀತನೂರ ಗ್ರಾಮಕ್ಕೆ ಸಂಯೊಜಕರು ಮತ್ತು ಯೋಜನೆಯ ಕಾರ್ಯಕರ್ತರು ಭೇಟಿ ನೀಡಿ 20 ಜನ ರೈತರಿಗೆ ರೈತ ಸಂಪರ್ಕ ಕೇಂದ್ರದಲ್ಲಿ ಸಬ್‌ಸಿಡಿ (ಸಹಾಯಧನ) ಮುಖಾಂತರ ರೈತರಿಗೆ ಸಿಗುವ ಸರಕಾರದ ಸೌಲಭ್ಯಗಳ ಬಗ್ಗೆ ಮಾಹಿತಿ ನೀಡಿದರು. ಈ ಮಾಹಿತಿ ಪಡೆದ ಗ್ರಾಮದ ಮೂರು ಜನ ರೈತರು ಬಿತ್ತನೆ ಮಾಡುವ ದಿಂಡುಗಳನ್ನು ಪಡೆಯಲು ರೈತ ಸಂಪರ್ಕ ಕೇಂದ್ರಕ್ಕೆ ರೈತರ ಪರವಾಗಿ ಸಂಸ್ಥೆಯ ಸಂಯೋಜಕರು ಮತ್ತು ಕಾರ್ಯಕರ್ತರು ಅರ್ಜಿಗಳನ್ನು ಸಲ್ಲಿಸಿದರು. ಅರ್ಜಿ ಸಲ್ಲಿಸಿದ 15 ದಿನಗಳ ನಂತರ 02 ಜನ ರೈತರಿಗೆ ಬೀಜ ಬಿತ್ತುವ ದಿಂಡನ್ನು ಮಾರುಕಟ್ಟೆ ಬೆಲೆಗಿಂತ ಶೇಕಡಾ 50% ಕಡಿಮೆ ಬೆಲೆಯಲ್ಲಿ ಅಂದರೆ ರೂ.45,000/– ಗಳಲ್ಲಿ ಸಂಸ್ಥೆಯ ಮುಖಾಂತರ ಒದಗಿಸಲಾಯಿತು.

## “ತಿಪ್ಪೆ ಗೊಬ್ಬರ ಉತ್ತಮ ಪರಿಣಾಮಕಾರಿ ಬೇಳೆ”




ದಿನಾಂಕ:13–11–2024ರಂದು ಕಲಬುರಗಿ ಜಿಲ್ಲೆಯಲ್ಲಿ ಬರುವ ನಂದೂರ (ಕೆ) ಗ್ರಾಮದಲ್ಲಿ ಸೇವಾ ಸಂಗಮ ಸಂಸ್ಥೆಯ ಉಜ್ಜಿವನ ಕಾರ್ಯಕ್ರಮದ ಸಂಯೋಜಕರಾದ ಶ್ರೀ ಚಂದ್ರಕಾಂತ ರವರು ಗ್ರಾಮದ ಸಮುದಾಯ ರೈತರಾದ ಶ್ರೀ ತೋಲಾಪಾಶಾ ರವರ ಹೊಲಕ್ಕೆ ಭೇಡಿ ನೀಡಿ ಹೊಲದಲ್ಲಿ ಬಿತ್ತುವ ಮೊದಲು ತಿಪ್ಪೆಗೊಬ್ಬರ ತಮ್ಮ ಹೊಲದಲ್ಲಿ ಹಾಕಬೇಕು ಇದರಿಂದ ಹೊಲದಲ್ಲಿ ಉತ್ತಮ ಗುಣಮಟ್ಟದ ಹಾಗೂ ಫಲವತ್ತಾದ ಬೆಳೆಗಳನ್ನು ಒದಗಿಸುತ್ತದೆ ಎಂದು ತಿಪ್ಪೆಗೊಬ್ಬರದ ಉತ್ತಮ ಪರಿಣಾಮಗಳ ಬಗ್ಗೆ ಮಾಹಿತಿಯನ್ನು ನೀಡಿದಾಗ ಶ್ರೀ ತೋಲಾಪಾಶಾ ರವರು ತನ್ನ ಹೊಲಗಳಲ್ಲಿ ತಿಪ್ಪೆಗೊಬ್ಬರವನ್ನು ಬಳಸುವುದಾಗಿ ಹೆಳಿದರು.

## “ಹಿಂಗಾರು ಬೆಳೆ ರೈತ ಸಂಪರ್ಕ ಕೇಂದ್ರದಿಂದ ಉಚಿತವಾಗಿ ಕಡಲೆ”



ಸೇವಾ ಸಂಗಮ ಸಂಸ್ಥೆಯಿಂದ ಉಜ್ಜೀವನ ಕಾರ್ಯಕ್ರಮದ ಯೋಜನೆಯ ಅಡಿಯಲ್ಲಿ ಸಂಯೋಜಕರು ಮತ್ತು ಕಾರ್ಯಕರ್ತರು ಧರ್ಮಾಪೂರ ಗ್ರಾಮಕ್ಕೆ ಭೇಡಿ ನೀಡಿ ಹಿಂಗಾರು ಬೇಳೆಗಳ ಬಗ್ಗೆ ರೈತರಿಗೆ ಮತ್ತು ಸ್ವಂ-ಸೇವಕರಿಗೆ ಮಾಹಿತಿ ನೀಡಿದರು. ರೈತ ಸಂಪರ್ಕ ಕೇಂದ್ರದಿಂದ ಉಚಿತವಾಗಿ ಕಡಲೆ ಮತ್ತು ಜೋಳ ಬಿಜಗಳನ್ನು ಬಿತ್ತನೆ ಮಾಡಲು ಸ್ವಂ-ಸೇವಕರಾದ ಶ್ರೀ ಕುಮಾರ ಮಲ್ಲು ರವರು 20 ಜನ ರೈತರಲ್ಲಿ ಪ್ರತಿಯೊಬ್ಬರಿಗೆ ತಲಾ 20 ಕೆ.ಜಿ ಕಡಲೆ ಬೀಜಗಳನ್ನು ಉಚಿತವಾಗಿ ಕೊಡಿಸಲಾಯಿತು.

## “ಸುಸ್ಥಿರ ಜೀವನೋಪಾಯ ಯೋಜನೆಗಳ ಕುರಿತು



ಸೇವಾ ಸಂಗಮ ಸಂಸ್ಥೆಯಿಂದ ಉಜ್ಜೀವನ ಕಾರ್ಯಕ್ರಮದ ಯೋಜನೆಯ ಅಡಿಯಲ್ಲಿ ದಿನಾಂಕ: 20-11-2024 ರಂದು ಕಲಬುರಗಿ ಜಿಲ್ಲೆಯಲ್ಲಿ ಬರುವ ಫರಹತಾಬಾದ ಗ್ರಾಮದಲ್ಲಿ ಉಜ್ಜೀವನ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀಮತಿ ಇಂದು ರವರು ಗ್ರಾಮದ “ರೈತ ದೇವಕಿ ಮಹಿಳಾ ಸ್ವ ಸಹಾಯ ಸಂಘ ಕ್ಕೆ” ಭೇಟಿ ಮಾಡಿ ಸುಸ್ಥಿರ ಜೀವನೋಪಾಯ ಯೋಜನೆಗಳನ್ನು ಕುರಿತು ಕಾರ್ಯಕ್ರಮವನ್ನು ಆಯೋಜಿಸಿ, ಸಂಘದಎಲ್ಲಾ ಸದಸ್ಯರುತಮ್ಮನ್ನುಸ್ವ-ಉದ್ಯೋಗದಲ್ಲಿ ತೊಡಗಿಸಿಕೊಳ್ಳಲುಮಾಹಿತಿ ನೀಡಲಾಯಿತು.

## “ಕ್ಯಾನ್ಸರ್ ಕುರಿತು ಕಾರ್ಯಕ್ರಮ”



ದಿನಾಂಕ: 25-11-2024ರಂದು ಕಲಬುರಗಿ ಜಿಲ್ಲೆಯಲ್ಲಿ ಬರುವ ಉದನೂರ ಗ್ರಾಮಕ್ಕೆ ಸೇವಾ ಸಂಸ್ಥೆಯ ವತಿಯಿಂದ ಸ್ಪರ್ಶ ಕಾರ್ಯಕ್ರಮದ ಕಾರ್ಯಕರ್ತರಾದ ಶ್ರೀಮತಿ ನಂದಿನಿ ರವರು ಗ್ರಾಮದ 15 ಜನ ಮಹಿಳೆಯರಿಗೆ ಕ್ಯಾನ್ಸರ್ ಕುರಿತು ಕಾರ್ಯಕ್ರಮವನ್ನು ಆಯೋಜಿಸಿದರು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಹಿಳೆಯರಿಗೆ 07 ಪ್ರಕಾರದ ಕ್ಯಾನ್ಸರ ರೋಗದ ಲಕ್ಷಣಗಳು ಮತು ಅದರ ಸೂಕ್ತ ಚಿಕಿತ್ಸೆಯ ಬಗ್ಗೆ ಕಾರ್ಯಕ್ರಮದಲ್ಲಿ ಅರಿವು ಮೂಡಿಸಲಾಯಿತು. ಈ ಗ್ರಾಮದಲ್ಲಿ ಇಂತಹ ಕ್ಯಾನ್ಸರ ರೋಗದ ಲಕ್ಷಣಗಳು ವ್ಯಕ್ತಿಯಲ್ಲಿ ಕಂಡು ಬಂದರೆ ಹತ್ತಿರದ ಅರೋಗ್ಯ ಕೇಂದ್ರಕ್ಕೆ ತುರ್ತುಚಿಕಿತ್ಸೆಗಾಗಿ ಕರೆದುಕೊಂಡು ಹೋಗಬೇಕು ಹಾಗೂ ಸೇವಾ ಸಂಗಮ ಸಂಸ್ಥೆಗೆ ಸಂಪರ್ಕಿಸಬೇಕೆಂದು ತಿಳಿಸಲಾಯಿತು.

**ಆರ್ಬಿಟ್ ಸಂಸ್ಥೆ ಹಾಗೂ ಸೇವಾ ಸಂಗಮ ಸಂಸ್ಥೆಯ ನಿರ್ದೇಶಕರಾದ ಫಾದರ್ ವಿಕ್ಟರ್ ವಾಸ, ಸಹ ನಿರ್ದೇಶಕರಾದ ಫಾದರ್ ವಿಜಯ್‌ಕುಮಾರ್ ಮತ್ತು ಫಾದರ್ ದಿಪಕ ಹಾಗು ಎಲ್ಲಾ ಕಾರ್ಯಕ್ರಮಗಳ ಕಾರ್ಯಕರ್ತರಿಂದ ಸಮಸ್ತ ನಾಡಿನ ಜನತೆಗೆ ಕ್ರಿಸ್ಮಸ ಹಬ್ಬದ ಹಾಗು ಹೊಸ ವರ್ಷದ ಹಾರ್ದಿಕ ಶುಭಾಶಯಗಳು.**

## “ಸುದ್ದಿ ಪತ್ರಿಕೆಯಲ್ಲಿ ಪ್ರಕಟಿಸಲಾದ ಆರ್ಬಿಟ್ ಸಂಸ್ಥೆ ಮತ್ತು ಸೇವಾ ಸಂಘಮ ಸಂಸ್ಥೆ ಕಾರ್ಯಕ್ರಮಗಳು”



ಬೆಳವಣಿಗೆ ಕುಂಠಿತ ಮಕ್ಕಳ ಪೋಷಕರ ಬಲವರ್ಧನೆ ಕಾರ್ಯಕ್ರಮ



ಕುಂಠಿತ ಮಕ್ಕಳ ಪೋಷಕರ ಬಲವರ್ಧನೆ

• ದಿ ಡೈಲಿ ನ್ಯೂಸ್ ಹುಮನಾಬಾದ್



ಕುಂಠಿತ ಮಕ್ಕಳಿಗೆ ವಿಶೇಷವಾದ ಆರೈಕೆ

ಆರ್ಬಿಟ್ ಸಂಸ್ಥೆ ಮತ್ತು ಎಪಿಡಿ ಸಂಸ್ಥೆಯ ಸಂಯುಕ್ತದಲ್ಲಿ

# ORBIT NGO

Non-Governmental Organization
Humnabad, Karnataka

Organization of Bidar Integral Transformation

## Scan this QR Code

## TO DONATE

www.orbitbidar.in

# SEVA SANGAMA

Organization for Social Concern Development

## Scan this QR Code

## TO DONATE

www.sevasangama.in

# ಸೇವಾ ಸಂಗಮ ಮತ್ತು ಆರ್ಬಿಟ್ ಸಂಸ್ಥೆ (NGO)
# ಗುಲ್ಬರ್ಗಾ ಧರ್ಮಕ್ಷೇತ್ರ

## Appeal

ಗುಲ್ಬರ್ಗಾ ಧರ್ಮ ಕ್ಷೇತ್ರವು ಉತ್ತರ ಕರ್ನಾಟಕದ ಹಿಂದುಳಿದ ಜಿಲ್ಲೆಗಳಾದ ಬೀದರ್, ಬಿಜಾಪುರ್, ಯಾದಗಿರಿ ಹಾಗೂ ಗುಲ್ಬರ್ಗಾ ಜಿಲ್ಲೆಗಳನ್ನು ಒಳಗೊಂಡಿದೆ. ಗುಲ್ಬರ್ಗಾ ಧರ್ಮಕ್ಷೇತ್ರವು ಉಗಮ ಆಗುವುದಕ್ಕಿಂತ ಮುಂಚೆ ಮಂಗಳೂರು ಧರ್ಮಕ್ಷೇತ್ರದಿಂದ ಗುರುಗಳು ಹಾಗೂ ಕನ್ಯಾ ಭಗಿನಿಯರು ಬೀದರ್ ಜಿಲ್ಲೆಯ ಸರ್ವತೋಮುಖ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. ಆರ್ಬಿಟ್ ಸಮಾಜ ಸೇವಾ ಸಂಸ್ಥೆಯ ಮುಖಾಂತರ 1993 ರಿಂದ ಆರೋಗ್ಯ, ಶಿಕ್ಷಣ, ಮಹಿಳಾ ಸಬಲೀಕರಣ, ಅಂಗವಿಕಲರ ಸಬಲೀಕರಣ ಹಾಗೂ ನಿರ್ಗತಿಕರಿಗೆ ಆಸರೆ ಒದಗಿಸುವ ಕೆಲಸವನ್ನು ಮಾಡಿದ್ದಾರೆ. ಹಾಗೆ 2005ನೇ ಇಸವಿಯಲ್ಲಿ ಗುಲ್ಬರ್ಗಾ ಧರ್ಮಕ್ಷೇತ್ರ ಉಗಮವಾದಾಗಿನಿಂದ ಈ ಸಮಾಜ ಸೇವಾ ಕೆಲಸವನ್ನು ನಾಲ್ಕು ಜಿಲ್ಲೆಗಳಲ್ಲಿ ಕೈಗೊಳ್ಳಲಾಯಿತು. ಸೇವಾ ಸಂಗಮ ಹಾಗೂ ಆರ್ಬಿಟ್ ಸಂಸ್ಥೆಗಳ ಮುಖಾಂತರ ಮಹಿಳಾ ಸಬಲೀಕರಣ, ಮಕ್ಕಳ ಶಿಕ್ಷಣ, ಅಂಗವಿಕಲರ ಕಾರ್ಯಕ್ರಮ, ಪರಿಸರ ಸಂರಕ್ಷಣೆ, ನಿರುದ್ಯೋಗಿಗಳಿಗೆ ಕೌಶಲ್ಯ ತರಬೇತಿ, ಮಾನಸಿಕ ಅಸ್ವಸ್ಥರಿಗೆ ಪುನರ್ವಸತಿ, ಎಂಟು ವರ್ಷಕ್ಕಿಂತ ಕೆಳಗಿನ ಬೆಳವಣಿಗೆಯಲ್ಲಿ ಕುಂಠಿತ ಹೊಂದಿದ ಮಕ್ಕಳಿಗೆ ಚಿಕಿತ್ಸೆ, ನೈಸರ್ಗಿಕ ವಿಪತ್ತು ನಿವಾರಣೆ, ಕ್ಯಾನ್ಸರ್ ಜಾಗೃತಿ ಆಂದೋಲನ, ಹೀಗೆ ಸಮಾಜದಿಂದ ಹಂಚಿಕೆ ತಳ್ಳಲ್ಪಟ್ಟ ಜನರಿಗೆ ಪುರ್ನವಸತಿ ನೀಡುವ ಕೆಲಸವನ್ನು ಈ ಎರಡು ಸಂಸ್ಥೆಗಳು ಮಾಡುತ್ತಿವೆ. ಹಲವಾರು ಕಾರ್ಯಕ್ರಮಗಳ ಮುಖಾಂತರ ನಮ್ಮ ಎರಡು ಸಂಸ್ಥೆಗಳು ಬಡವರಿಗೆ, ನಿರ್ಗತಿಕರಿಗೆ, ಶೋಷಿತರಿಗೆ, ಹಾಗೂ ವಿವಿಧ ಶೋಷಣೆಗಳಿಗೆ ಒಳಗಾದ ಜನರಿಗೆ ಸ್ಪೂರ್ತಿ, ಶಕ್ತಿ, ಹಾಗೂ ಜೀವವನ್ನು ತುಂಬುತ್ತವೆ. ಈ ಸೇವೆಗಳನ್ನು ಹೆಚ್ಚು ಜನರಿಗೆ ತಲುಪಿಸಲು, ನಿಮ್ಮ ಸಹಾಯ ಹಸ್ತವನ್ನು ಹಾಗೂ ನಮ್ಮೊಂದಿಗೆ ಸೇರಿ ಸುಂದರ ಸಮಾಜವನ್ನು ಕಟ್ಟಲು ನಿಮ್ಮ ನೆರವನ್ನು ಅಪೇಕ್ಷಿಸುತ್ತೆವೆ.

ಬನ್ನಿ ಉತ್ತಮ ಸಮಾಜವನ್ನು ಕಟ್ಟೋಣ.



**TO DONATE, SCAN THE QR CODE**

ನಿಮ್ಮ ಸಹಾಯದಿಂದ ಗುಲ್ಬರ್ಗಾ ಹಾಗೂ ಬೀದರ, ಕೋಳಗೇರಿ ನಿವಾಸ ಮಕ್ಕಳು ಉತ್ತಮ ಶಿಕ್ಷಣ ಪಡೆಯುತ್ತಾರೆ.

ನಿಮ್ಮ ಸಹಾಯದಿಂದ ವಿಶೇಷ ಚೇತನ ಮಕ್ಕಳು ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳು ಕಂಡುಕೊಳ್ಳುತ್ತಾರೆ.

ಪ್ರಾಯೋಜಕರು ಒಂದು ಟ್ಯೂಷನ್ ಸೇಂಟರ್ ಪ್ರತಿ ತಿಂಗಳು 4000/- ವರ್ಷಕ್ಕೆ 40,000/-

ಪ್ರಾಯೋಜಕರು ಒಂದು ಮಗು ರೂ.500 ಪ್ರತಿ ತಿಂಗಳು / ವರ್ಷಕ್ಕೆ 6000/-

ನೀವು ಧನ ಸಹಾಯ ಮಾಡಿದ ಮೇಲೆ ನಿಮ್ಮ ವಿಳಾಸ ಮತ್ತು PAN number ಕೆಳಗಿರುವ ಸಂಖ್ಯೆಗೆ WhatsApp ಮಾಡುವುದು.

**(Only for Indian Citizens)**

**Bank Account Details**

Name : Sevasangama Development Society
Account No : 16040100022902
IFSC Code : FDRL0001604
Bank : Federal Bank
Branch : Super Market Kalaburagi

Fr. Victor Anil Vas
Director, Seva Sangama & ORBIT


Address

Seva Sangama Development Society, Near Kendriya Vidyalaya, Kotnoor D, Kalaburagi, Karnataka-585102
Contact: 8660968063 / 9743112739 - Email: sevasangama2006@gmail.com / Website: www.sevasangama.in